# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 21-12-2024ರ ಶನಿವಾರ, ಪೂರ್ವಾಹ್ನ 11.00 ಗಂಟೆಗೆ ನಡೆದ "ಸಿಂಡಿಕೇಟಿನ ಎಂಟನೇ ಸಾಮಾನ್ಯ ಸಭೆ"ಯ ನಡಾವಳಿ.**

**ಉಪಸ್ಥಿತರು:**

1. ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು – ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ. – ಸದಸ್ಯರು
   ಪ್ರೊ. ಎ.ಹೆಚ್.ಎಂ.ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು,
   ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
3. ಡಾ. ಟಿ.ಆರ್.ಚಂದ್ರಶೇಖರ್ – ಸದಸ್ಯರು
4. ಶ್ರೀ ಕೆ.ಗೋಕುಲ್ ಗೋವರ್ಧನ್ – ಸದಸ್ಯರು
5. ಡಾ. ಅಂತೋಣಿ ಪೌಲ್ ರಾಜ್ ಸಿ – ಸದಸ್ಯರು
6. ಡಾ. ಎಂ.ಪುಷ್ಪವತಿ – ಸದಸ್ಯರು
7. ಡಾ. ಮಹೇಶ್ ಟಿ.ಬಿ – ಸದಸ್ಯರು
8. ಡಾ. ಬಿ.ಆರ್.ಜಯಕುಮಾರಿ – ಸದಸ್ಯರು
9. ಶ್ರೀ ಮಹದೇಶು – ಸದಸ್ಯರು
10. ಶ್ರೀ ನಾಗರಾಜು ಸಿ – ಸದಸ್ಯರು
11. ಡಾ. ಬಸವರಾಜು ಸಿ – ಸದಸ್ಯರು
12. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ – ಸದಸ್ಯರು
13. ಡಾ. ಶಿಲ್ಪ ಜೆ – ಸದಸ್ಯರು
14. ಡಾ. ನಟರಾಜು ಹೆಚ್ ಎಸ್ – ಸದಸ್ಯರು
15. ಡಾ. ಎನ್.ನಾಗರಾಜ, ಕುಲಸಚಿವ (ಪರೀಕ್ಷಾಂಗ) – ಸದಸ್ಯರು
16. ಶ್ರೀಮತಿ ವಿ.ಆರ್. ಶೈಲಜ, ಕುಲಸಚಿವರು – ಸದಸ್ಯ ಕಾರ್ಯದರ್ಶಿ
17. ಶ್ರೀಮತಿ ರೇಖಾ ಕೆ ಎಸ್, ಹಣಕಾಸು ಅಧಿಕಾರಿ – ವಿಶೇಷ ಆಹ್ವಾನಿತರು

**ಅನುಪಸ್ಥಿತರು**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ನಂತರ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಿದರು.

1) ಡಾ. ಎಂ.ಪುಷ್ಪವತಿ, ನಿರ್ದೇಶಕರು, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
2) ಡಾ. ಮಹೇಶ್.ಟಿ.ಬಿ, ಪ್ರಾಂಶುಪಾಲರು, ವಾತ್ಸಲ್ಯ ಕಾಲೇಜ್ ಆಫ್ ಎಜುಕೇಷನ್, ನಟರಾಜ ಪ್ರತಿಷ್ಠಾನ, ಶ್ರೀ ಹೊಸಮಠ, ಮೈಸೂರು.
3) ಡಾ. ಬಿ.ಆರ್.ಜಯಕುಮಾರಿ, ಪ್ರಾಂಶುಪಾಲರು, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು.

ಇದುವರೆವಿಗೂ ಸಿಂಡಿಕೇಟಿನ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1) ಡಾ. ಗಣೇಶ.ಕೆ, ಪ್ರಾಂಶುಪಾಲರು, ಸೇಫಿಯಂಟ್ ವಾಣಿಜ್ಯ ಮತ್ತು ಆಡಳಿತ ಕಾಲೇಜು, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ, ಮೈಸೂರು.
2) ಪ್ರೊ. ಯಗ್ನಮೂರ್ತಿ ಶ್ರೀಕಾಂತ್, ಪ್ರಾಂಶುಪಾಲರು, ರೀಜಿನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ (ಎನ್‌ಸಿಇಆರ್‌ಟಿ), ಮೈಸೂರು.
3) ಡಾ. ಮುಜೀದ ಭಾನು, ಪ್ರಾಂಶುಪಾಲರು, ವಿದ್ಯಾ ವಿಕಾಸ್ ಪ್ರಥಮ ದರ್ಜೆ ಕಾಲೇಜು, ಬನ್ನೂರು ರಸ್ತೆ, ಆಲನಹಳ್ಳಿ ಬಡಾವಣೆ, ಮೈಸೂರು.

ಮಾನ್ಯ ಕುಲಪತಿಗಳು ಹೊಸದಾಗಿ ಸಿಂಡಿಕೇಟ್ ಸದಸ್ಯರುಗಳಾಗಿ ಆಗಮಿಸಿರುವಂತಹ ಮೂರು ಜನ ಸದಸ್ಯರುಗಳಿಗೆ ಸ್ವಾಗತವನ್ನು ಕೋರುತ್ತಾ, ಮತ್ತೊಮ್ಮೆ ಸಭೆಗೆ ಆಗಮಿಸಿದಂತಹ ಎಲ್ಲಾ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ಮಾಜಿ ಮುಖ್ಯಮಂತ್ರಿಗಳಾದ ಡಾ. ಎಸ್.ಎಂ. ಕೃಷ್ಣ ಅವರ ನಿಧನಕ್ಕೆ ಸಂತಾಪವನ್ನು ಸೂಚಿಸುತ್ತಾ, ಅವರು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿಯೂ ಹಾಗೂ ಅಧಿಕಾರದಲ್ಲಿದ್ದ ಸಮಯದಲ್ಲಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ಮಾಡಿರುವಂತಹ ಸಹಾಯ, ಸಲಹೆ ಮತ್ತು ಸಹಕಾರಗಳಿಗೆ ಕೃತಜ್ಞತೆ ಸಲ್ಲಿಸಿದರು. ಹಾಗೂ 104ನೇ ಘಟಿಕೋತ್ಸವದಲ್ಲಿ ಶ್ರೀ ಎಸ್.ಎಂ. ಕೃಷ್ಣ ಅವರಿಗೆ ಡಾಕ್ಟೊರೇಟ್ ಪದವಿಯನ್ನು ವಿಶ್ವವಿದ್ಯಾನಿಲಯದಿಂದ ನೀಡಿರುವುದನ್ನು ಸ್ಮರಿಸುತ್ತಾ, ಡಾ. ಎಸ್.ಎಂ. ಕೃಷ್ಣ ಅವರ ಬಗ್ಗೆ ಮೆಲುಕು ಹಾಕುತ್ತಾ ಅವರು ನಡೆದ ಬಂದ ದಾರಿಯಲ್ಲಿ ನಾವು ನಡೆಯೋಣವೆಂದು ಸಭೆಗೆ ತಿಳಿಸಿದರು. ನಂತರ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಮೃತರ ಗೌರವಾರ್ಥ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿದರು.

ಮೈಸೂರು ವಿಶ್ವವಿದ್ಯಾನಿಲಯದ 105ನೇ ವಾರ್ಷಿಕ ಘಟಿಕೋತ್ಸವವನ್ನು ಜನವರಿ 18, 2025ರ ಶನಿವಾರದಂದು ನಿಗದಿಪಡಿಸಲಾಗಿದೆ. ಮುಂದುವರೆದು, ವಿಶ್ವವಿದ್ಯಾನಿಲಯಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಸಂಶೋಧನಾ (Research) ಕಾರ್ಯವನ್ನು ಕೈಗೊಳ್ಳಲು ಯಾವುದೇ ಹಣಕಾಸು ನೆರವು ನೀಡುತ್ತಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಸಂಶೋಧನಾ ಕಾರ್ಯವನ್ನು (Research Proposal) ಕೈಗೊಳ್ಳಲು ರಾಜ್ಯ ಸರ್ಕಾರಕ್ಕೆ ರೂ.100.00 ಕೋಟಿಗಳ ಅನುದಾನವನ್ನು ಕೋರಿ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಈ ಯೋಜನೆ ಮುಖಾಂತರ ಅನುದಾನ ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆಗೊಂಡಲ್ಲಿ ಸಂಶೋಧನಾ ಕಾರ್ಯವನ್ನು ಮುಂದುವರೆಸಲು ಅನುಕೂಲವಾಗುವುದೆಂದು ಸಭೆಗೆ ತಿಳಿಸಿದರು.

ಕೇಂದ್ರ ಸರ್ಕಾರಕ್ಕೂ ಸಹ ಸಂಶೋಧನಾ ಅನುದಾನಕ್ಕೆ Project Proposal ಅನ್ನು ಕಳುಹಿಸಲಿದ್ದೇವೆ ಹಾಗೂ ಪ್ರಾಚ್ಯವಿದ್ಯಾ ಸಂಶೋಧನಾಲಯವನ್ನು (ORI) ಅಭಿವೃದ್ಧಿಪಡಿಸಲು ಅನುದಾನ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಈ ಪ್ರಸ್ತಾವನೆಯಲ್ಲಿ ನಮ್ಮಲ್ಲಿರುವ ಇ.ಎಂ.ಆರ್.ಸಿ ಕೇಂದ್ರದಂತೆಯೇ ಓಆರ್‌ಐ ಸಿಬ್ಬಂದಿಗಳಿಗೆ ವೇತನವನ್ನು ನೀಡುವುದು ಹಾಗೂ ಹಣಕಾಸಿನ ನೆರವು, ಇನ್ನಿತರ ಸೌಲಭ್ಯಗಳನ್ನು ಕೇಂದ್ರ ಸರ್ಕಾರವೇ ನೀಡುತ್ತದೆ. ಆದ್ದರಿಂದ ಓಆರ್‌ಐಗೆ 3-4 ಕೋಟಿಗಳ ಅನುದಾನ ಪ್ರಾಜೆಕ್ಟ್ ಸಿಗುವ ಅವಕಾಶಗಳಿವೆ ಎಂದು ತಿಳಿಸಿದರು. ಓಆರ್‌ಐನಲ್ಲಿರುವ ಗ್ರಂಥಗಳನ್ನು ಡಿಜಿಟಲೈಸ್ ಮಾಡಿದ ನಂತರ ಅನೇಕರು ಹಣವನ್ನು ನೀಡಲು ಮುಂದೆ ಬಂದಿದ್ದಾರೆ. ಹಾಗೆಯೇ ಓಆರ್‌ಐಗೆ ಬೇರೆಡೆಯಿಂದ ಅಂದರೆ ಸರ್ಕಾರೇತರ ಸಂಸ್ಥೆಗಳಿಂದ ಅಂದರೆ ಶೃಂಗೇರಿ ಮಠದಿಂದ ಸುಮಾರು ರೂ. 95.00 ಲಕ್ಷಗಳನ್ನು ನೀಡಿದ್ದಾರೆ. ಅವರು ಓಆರ್‌ಐನಲ್ಲಿ ಸಂಶೋಧನೆ ನಡೆಸಲು ಹಾಗೂ ವಿದ್ವಾಂಸರನ್ನು ನೇಮಕ ಮಾಡಿಕೊಳ್ಳಲು ಅನುವಾಗುವಂತೆ ಕಾರ್ಯತತ್ಪರರಾಗಿದ್ದಾರೆ.

ಮುಂದುವರೆದು, ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳಾದ ತಾವುಗಳು ಮಂಡ್ಯ/ಚಾಮರಾಜನಗರ/ಹಾಸನ ವಿಶ್ವವಿದ್ಯಾನಿಲಯದಲ್ಲಿರುವ ಬೋಧಕ/ಬೋಧಕೇತರ ನೌಕರರಿಗೆ

ಮುಂಬಡ್ತಿಯನ್ನು ನೀಡುವ ಬಗ್ಗೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುವುದು ಎಂಬುದರ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚಿಸಿದ್ದೀರಿ. ದಿನಾಂಕ: 28.11.2024 ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರು ಮತ್ತು ಮಂಡ್ಯ ವಿಶ್ವವಿದ್ಯಾಲಯಗಳಲ್ಲಿನ ಆಡಳಿತಾತ್ಮಕ ವಿಷಯಗಳ ಸಮಸ್ಯೆಗಳ ಕುರಿತಂತೆ ಜರುಗಿದ ಸಭೆಯ ನಡಾವಳಿಯನ್ನು ಸಭೆಗೆ ಪ್ರಸ್ತುತ ಪಡಿಸುತ್ತಾ, ಮಂಡ್ಯ ವಿಶ್ವವಿದ್ಯಾಲಯ, ಹಾಸನ ವಿಶ್ವವಿದ್ಯಾಲಯ, ಚಾಮರಾಜನಗರ ವಿಶ್ವವಿದ್ಯಾಲಯದ ಬೋಧಕ/ಬೋಧಕೇತರರು ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ನೌಕರರೇ ಆಗಿರುವುದರಿಂದ, ಈ ಕೆಳಕಂಡಂತೆ ಕ್ರಮವಹಿಸಲು ನಿರ್ದೇಶನ ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು.

1. ಮಂಡ್ಯ ವಿಶ್ವವಿದ್ಯಾಲಯ, ಹಾಸನ ಮತ್ತು ಚಾಮರಾಜನಗರ ವಿಶ್ವವಿದ್ಯಾಲಯಗಳು ಪದೋನ್ನತಿಗೆ ಅರ್ಹರಿರುವ ಬೋಧಕ/ಬೋಧಕೇತರರ ಮಾಹಿತಿ/ದಾಖಲೆಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು, ಮೈಸೂರು ವಿಶ್ವವಿದ್ಯಾಲಯವು ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಅರ್ಹ ಬೋಧಕ/ಬೋಧಕೇತರರಿಗೆ ಪದೋನ್ನತಿ ನೀಡಲು ಅಗತ್ಯ ಕ್ರಮವಹಿಸತಕ್ಕದ್ದು.
2. ನೂತನ ವಿಶ್ವವಿದ್ಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸೇವಾ ವಿಷಯಗಳಾದ ರಜೆ, ವಿದೇಶಿ ಪ್ರವಾಸ ಇತ್ಯಾದಿ ದೈನಂದಿನ ಕಾರ್ಯಚಟುವಟಿಕೆಗಳನ್ನು ನೂತನ ವಿಶ್ವವಿದ್ಯಾಲಯಗಳೇ ಕ್ರಮವಹಿಸುವುದು. ನೂತನ ವಿಶ್ವವಿದ್ಯಾಲಯದಲ್ಲಿ ಕ್ರಮವಹಿಸಲು ಸಾಧ್ಯವಿಲ್ಲದಿರುವ ಪ್ರಸ್ತಾವನೆಗಳಿಗೆ ಮಾತ್ರ ಅಗತ್ಯ ಶಿಫಾರಸ್ಸಿನೊಂದಿಗೆ ಮೈಸೂರು ವಿಶ್ವವಿದ್ಯಾಲಯಕ್ಕೆ ಕಳುಹಿಸುವುದು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನ ರಚನೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕಾರ ರಚನೆಯಾಗಿರುತ್ತದೆ. ಹಾಗೆಯೇ ಮಾನ್ಯ ಕುಲಪತಿಗಳ ವಿವೇಚನೆಗೆ ಕೆಲವು ಅಧಿಕಾರಗಳನ್ನು ನೀಡಲಾಗಿರುತ್ತದೆ. ಪ್ರಾಂಶುಪಾಲರುಗಳನ್ನು ಸಿಂಡಿಕೇಟ್‌ಗೆ ಸದಸ್ಯರನ್ನಾಗಿ ಹೇಗೆ ನಾಮನಿರ್ದೇಶನ ಮಾಡಿದ್ದೀರೋ ಅದೇ ರೀತಿಯಲ್ಲಿ ಹಿರಿಯ ಡೀನ್‌ಗಳನ್ನು ಹಾಗೂ ಹಿರಿಯ ಪ್ರಾಧ್ಯಾಪಕರನ್ನು ನಾಮನಿರ್ದೇಶನ ಮಾಡಬೇಕಾಗಿರುತ್ತದೆ. ಆದರೆ ಮೇ-ಜೂನ್ 2024ರ ಮಾಹೆಯಿಂದ ಇಬ್ಬರೂ ಸದಸ್ಯರುಗಳನ್ನು ಸಿಂಡಿಕೇಟ್‌ಗೆ ಇನ್ನೂ ನಾಮನಿರ್ದೇಶನ ಮಾಡಿಲ್ಲ. ಬೇರೆ ಯಾರಾದರೂ ಆಕ್ಷೇಪಣೆ ಮಾಡಿದ್ದಲ್ಲಿ ಕೋರ್ಟ್‌ಗೆ ಹೋಗುವ ಸಂಭವವಿದ್ದು, ಸಿಂಡಿಕೇಟ್‌ಗೆ ಅವರುಗಳನ್ನು ನಾಮನಿರ್ದೇಶನ ಮಾಡದೆ, ನಾವೇ ಸಿಂಡಿಕೇಟ್‌ನಲ್ಲಿ ನಿರ್ಣಯ ತೆಗೆದುಕೊಂಡಲ್ಲಿ ಮುಂದೆ ತೊಂದರೆಯಾಗಬಹುದೆಂದು ತಿಳಿಸುತ್ತಾ, ಮಾನ್ಯ ಕುಲಪತಿಗಳಾದ ತಾವು ಹಿರಿಯ ಡೀನ್ ಹಾಗೂ ಹಿರಿಯ ಪ್ರಾಧ್ಯಾಪಕರುಗಳನ್ನು ಸಿಂಡಿಕೇಟ್‌ಗೆ ಸದಸ್ಯರನ್ನಾಗಿ ಏತಕ್ಕಾಗಿ ನಾಮನಿರ್ದೇಶನ ಮಾಡಿಲ್ಲವೆಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಹಿರಿಯ ಪ್ರಾಧ್ಯಾಪಕರನ್ನು ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡುವಂತಹ ಪ್ರಕ್ರಿಯೆ ಸರ್ಕಾರದ್ದಾಗಿರುತ್ತದೆ. ಹಾಗೆಯೇ ಪ್ರಸ್ತುತ ಹಿರಿಯ ಡೀನರು ಹಾಸನ ವಿಶ್ವವಿದ್ಯಾನಿಲಯದವರು ಆಗಿರುವುದರಿಂದ ಇವರನ್ನು ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡಬೇಕಾದಲ್ಲಿ ಸರ್ಕಾರದ ನಿರ್ದೇಶನದ ಮೇರೆಗೆ ಮಾಡಬೇಕಾಗುತ್ತದೆ. ಈಗಾಗಲೇ ತಿಳಿಸಿದಂತೆ ದಿನಾಂಕ: 28.11.2024ರಂದು ನಡೆದಂತಹ ಸಭೆಯಲ್ಲಿ ಮಂಡ್ಯ/ಹಾಸನ/ಚಾಮರಾಜನಗರ ವಿಶ್ವವಿದ್ಯಾನಿಲಯಗಳಲ್ಲಿನ ಬೋಧಕ ವರ್ಗದವರ ಮುಂಬಡ್ತಿಗೆ ಸಂಬಂಧಿಸಿದಂತೆ ಮಾತ್ರ ಕ್ರಮವಹಿಸುವಂತೆ ವಿಶ್ವವಿದ್ಯಾನಿಲಯಕ್ಕೆ ನಿರ್ದೇಶನವನ್ನು ನೀಡಿರುತ್ತಾರೆ. ಪ್ರಾಂಶುಪಾಲರನ್ನು ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡಲು ಕುಲಪತಿಗಳಿಗೆ ಅಧಿಕಾರವಿದೆ. ಹಿರಿಯ ಪ್ರಾಧ್ಯಾಪಕರನ್ನು ಸರ್ಕಾರದ ಅನುಮೋದನೆಯೊಂದಿಗೆ ನಾಮನಿರ್ದೇಶನ ಮಾಡಬೇಕು. ಹಿರಿಯ ಡೀನರನ್ನು ವಿಶ್ವವಿದ್ಯಾನಿಲಯದವರನ್ನೇ ಮಾಡಿದರೆ ಅವರು ಕೋರ್ಟಿಗೆ ಹೋಗುವ ಸಾಧ್ಯತೆ ಇರುವುದರಿಂದ ಹಿರಿಯ ಡೀನರನ್ನು ನಾಮನಿರ್ದೇಶನ ಮಾಡಿರುವುದಿಲ್ಲ. ಆದ್ದರಿಂದ ಸರ್ಕಾರಕ್ಕೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪತ್ರವನ್ನು ಬರೆಯಲಾಗಿದೆ ಎಂದು ಸಭೆಯ ಗಮನಕ್ಕೆ ತರುತ್ತಾ, ಮತ್ತೊಮ್ಮೆ ದಿನಾಂಕ: 28.11.2024 ರಂದು ನಡೆದ ಸಭೆಯ ನಡಾವಳಿಯನ್ನು ಸಭೆಗೆ ಪ್ರಸ್ತುತಪಡಿಸಿದರು.

ಕುಲಸಚಿವರು ದಿನಾಂಕ: 29.10.2024ರಂದು ನಡೆದ 7ನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ಕೈಗೊಂಡ ಕ್ರಮಗಳನ್ನು ಹಾಗೂ ನಡಾವಳಿಯನ್ನು ದೃಢೀಕರಿಸುವ ಬಗೆಗಿನ ವಿಷಯವನ್ನು ಮಂಡಿಸಿ, ಸದಸ್ಯರುಗಳಾದ ತಾವು ನಡಾವಳಿಯ ಬಗ್ಗೆ ಚರ್ಚೆಯಿದ್ದಲ್ಲಿ ತಿಳಿಸಬಹುದೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವಿಷಯ ಸಂಖ್ಯೆ: 2024/7.6ಕ್ಕೆ ಸಂಬಂಧಿಸಿದಂತೆ, ಹಿಂದಿನ ಸಭೆಯಲ್ಲಿ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಗಳ ವಹಿವಾಟನ್ನು ನಡೆಸಲು ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆ ತೆರೆದಿರುವುದಕ್ಕೆ ಅನುಸಮರ್ಥನೆಗೆ ವಿಷಯವನ್ನು ಮಂಡಿಸಿದ್ದೀರಿ. ಆ ಸಂದರ್ಭದಲ್ಲಿ ನಾನು ಕೊಟ್ಯಾಕ್ ಮಹೀಂದ್ರ ಬ್ಯಾಂಕ್ ಅಥವಾ ಐಡಿಎಫ್‌ಸಿ ಬ್ಯಾಂಕ್ ನಲ್ಲಿ ಹೆಚ್‌ಡಿಎಫ್‌ಸಿ ಬ್ಯಾಂಕ್‌ಗಿಂತ ಹೆಚ್ಚಿನ ಬಡ್ಡಿಯನ್ನು ನೀಡುತ್ತಾರೆ. ಜೀರೋಬ್ಯಾಲೆನ್ಸ್ ಅಕೌಂಟ್‌ಅನ್ನು ತೆರೆಯಲು, ಎಟಿಎಂಅನ್ನು ಒಳಗೊಂಡಂತೆ ಹಲವು ಸೌಲಭ್ಯಗಳನ್ನು ಒದಗಿಸುವುದರಿಂದ ಕೊಟ್ಯಾಕ್ ಮಹೀಂದ್ರ ಬ್ಯಾಂಕ್ ಅಥವಾ ಐಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆಯಲು ತಿಳಿಸಿದ್ದೆವು. ಕೊಟ್ಯಾಕ್ ಬ್ಯಾಂಕ್‌ನಲ್ಲಿ ನೀಡುವ ಎಲ್ಲಾ ಸೌಲಭ್ಯಗಳನ್ನು ಹೆಚ್‌ಡಿಎಫ್‌ಸಿ ಬ್ಯಾಂಕ್‌ನವರು ಭರಿಸುವುದಾದರೆ ಅಲ್ಲಿಯೇ ಖಾತೆಯನ್ನು ಮುಂದುವರಿಸಬಹುದೆಂದು ತಿಳಿಸಿದ್ದೆವು. ಇಂಜಿನಿಯರಿಂಗ್ ಕಾಲೇಜಿನಲ್ಲಿ ರೂ. 10.00 ಕೋಟಿಗಳಷ್ಟು ಹಣದ ವಹಿವಾಟು ಇರುವುದರಿಂದ, ಶೇಕಡ 7 ರಿಂದ 7.5ರಷ್ಟು ಸರಾಸರಿ ವರ್ಷಕ್ಕೆ ರೂ. ೯೦.೦೦ ಲಕ್ಷಗಳಷ್ಟು ನಮಗೆ ಬಡ್ಡಿ ಹಣ ದೊರಕುತ್ತದೆ. ಈಗಾಗಲೇ ವಿಶ್ವವಿದ್ಯಾನಿಲಯವು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದರಿಂದ ಬಡ್ಡಿಯ ಹಣ ದೊರಕಿದರೆ ಅನುಕೂಲವಾಗುತ್ತದೆ ಎಂದು ಸಭೆಗೆ ತಿಳಿಸಿದರು. ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆಗೆ ಬಡ್ಡಿಯ ಹಣ ಶೂನ್ಯವಾಗುತ್ತಿದೆ. ಆದ್ದರಿಂದ ಬಡ್ಡಿಯ ಹಣ ಹೆಚ್ಚು ಕೊಡುವ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಿರಿ ಅಥವಾ ರಾಷ್ಟ್ರೀಯ ಬ್ಯಾಂಕ್ ಆದ ಎಸ್‌ಬಿಐ ನಲ್ಲಿ ಖಾತೆಯನ್ನು ತೆರೆಯುವಂತೆ ತಿಳಿಸಿದ್ದೆವು. ಜೊತೆಗೆ ಐಡಿಎಫ್‌ಸಿ ಬ್ಯಾಂಕ್‌ನ ಉಪಾಧ್ಯಕ್ಷರ ಹತ್ತಿರ ಮಾತನಾಡಿದ ವಿಷಯವನ್ನು ತಿಳಿಸಿದ್ದೆ. ಜೊತೆಗೆ ಈಗಾಗಲೇ 6 ತಿಂಗಳಿಂದ ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗಿದೆ. ಆದ್ದರಿಂದ ಸಭೆಯಲ್ಲಿ ಮಾಡಿದಂತಹ ಸುದೀರ್ಘ ಚರ್ಚೆಯನ್ನು ಏಕೆ ನಡಾವಳಿಯಲ್ಲಿ ಸೇರಿಸಿರುವುದಿಲ್ಲವೆಂದು ಹಾಗೂ ಸದರಿ ವಿಷಯಕ್ಕೆ ಯಾವ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಹೆಚ್‌ಡಿಎಫ್‌ಸಿ ಬ್ಯಾಂಕ್ ಒಂದು ಉತ್ತಮವಾದ ಶ್ರೇಯಾಂಕವನ್ನೊಳಗೊಂಡ ಬ್ಯಾಂಕ್ ಎಂದು ಆರ್‌ಬಿಐ ತಿಳಿಸಿದೆ. ಬೇರೆ ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆಯಬೇಕಾದಲ್ಲಿ ಆ ಬ್ಯಾಂಕ್ ಪಬ್ಲಿಕ್ ಸೆಕ್ಟರ್ ಬ್ಯಾಂಕ್ ಆಗಿರಬೇಕು ಅಥವಾ ಸ್ಟ್ರಾಂಗ್‌ಆದ ಪ್ರೈವೇಟ್ ಸೆಕ್ಟರ್ ಬ್ಯಾಂಕ್ ಆಗಿರಬೇಕು. ಆರ್‌ಬಿಐ ಪ್ರಕಾರ ಎಸ್‌ಬಿಐ, ಹೆಚ್‌ಡಿಎಫ್‌ಸಿ ಹಾಗೂ ಐಸಿಐಸಿಐ ಬ್ಯಾಂಕ್ ಈ ಶ್ರೇಣಿಯಲ್ಲಿ ಬರುತ್ತವೆ ಹಾಗೂ Customized software ಮಾಡಿಕೊಟ್ಟಿದ್ದಾರೆ, 7.1% ಬಡ್ಡಿ ಕೊಡುತ್ತೇವೆ ಎಂದು ಸಹ ತಿಳಿಸಿರುವುದರಿಂದ ನಷ್ಟವಾಗುವುದಿಲ್ಲ. ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ಖಾತೆಯಲ್ಲಿ ಹಣವಿಟ್ಟರೆ ಯಾವ ರೀತಿಯ ಅನುಕೂಲವಾಗುತ್ತದೆ ಹಾಗೂ ಕೋಟಕ್ ಮಹೀಂದ್ರ ಬ್ಯಾಂಕ್‌ನ ಖಾತೆಯಲ್ಲಿ ಹಣವಿಟ್ಟರೆ ಯಾವ ರೀತಿಯ ಅನುಕೂಲವಾಗುತ್ತದೆ ಎಂಬುದರ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಕೇವಲ ಬಡ್ಡಿ ಹೆಚ್ಚಾಗಿ ನೀಡುತ್ತಾರೆ ಎಂಬ ಕಾರಣಕ್ಕೆ ಆ ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆಯಲು ಸಾಧ್ಯವಾಗುವುದಿಲ್ಲವೆಂದು ತಿಳಿಸುತ್ತಾ, ಇಂಜಿನಿಯರಿಂಗ್ ಕಾಲೇಜ್‌ನ ವಿದ್ಯಾರ್ಥಿಗಳು ಕಟ್ಟಿರುವ ಶುಲ್ಕ ಅಂದರೆ ಸೆಮಿಸ್ಟರ್‌ನ ಪ್ರಕಾರ ಯಾವ ವಿದ್ಯಾರ್ಥಿ ಎಷ್ಟು ಶುಲ್ಕ ಭರಿಸಿದ್ದಾರೆ ಎಂಬುದರ ಸಂಪೂರ್ಣ ಮಾಹಿತಿ ನಮಗೆ ಸಾಫ್ಟ್‌ವೇರ್‌ನಲ್ಲಿ ದೊರಕುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವಿದ್ಯಾರ್ಥಿಗಳು ಶುಲ್ಕ ಎಷ್ಟು ಕಟ್ಟಿದ್ದಾರೆ, ಕಟ್ಟಿಲ್ಲ ಎಂಬುದರ ಬಗ್ಗೆ ಮಾಹಿತಿಯನ್ನು ಇಡಬೇಕಾದದ್ದು ವಿಶ್ವವಿದ್ಯಾನಿಲಯದ ಕೆಲಸ. ಹಾಗಂತ ಬರುವ ಕೋಟ್ಯಾಂತರ ರೂಪಾಯಿಗಳ ಆದಾಯವನ್ನು ಕಳೆದುಕೊಳ್ಳಬಾರದು ಎಂದು ಅಭಿಪ್ರಾಯಿಸಿದರು.

ಶ್ರೀ ಮಹಾದೇಶು ಅವರು ಮಾತನಾಡಿ, ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆ ತೆರೆದಿರುವುದರ ಬಗ್ಗೆ ಹಿಂದೆ ನಡೆದಂತಹ ಸಭೆಯಲ್ಲಿ ಮಾನ್ಯ ಕುಲಪತಿಗಳು ಯಾವ ಬ್ಯಾಂಕಿನಲ್ಲಿ ಹೆಚ್ಚಿನ ಬಡ್ಡಿಯನ್ನು ನೀಡುತ್ತಾರೋ ಆ

ಬ್ಯಾಂಕಿನಲ್ಲಿ ಖಾತೆ ತೆರೆಯಬಹುದು ಎಂದು ಚರ್ಚೆ ನಡೆಸಲಾಗಿತ್ತು. ಆದರೆ ಹಣಕಾಸು ಅಧಿಕಾರಿಗಳಾದ ತಾವು ಈಗ ಆ ಬ್ಯಾಂಕಿನಿಂದ ಖಾತೆಯನ್ನು ತೆಗೆದು ಬೇರೆ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಲು ಸಾಧ್ಯವಾಗುತ್ತಿಲ್ಲ ಎಂದು ಹೇಳುತ್ತಿದ್ದೀರಿ, ಇದರಿಂದ ವಿಶ್ವವಿದ್ಯಾನಿಲಯಕ್ಕೆ ಬರುವ ಆದಾಯ ಕಡಿಮೆಯಾಗುತ್ತದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ನಾವು ಹಿಂದೆ ನಡೆದಂತಹ ಸಭೆಯಲ್ಲಿ ಎಲ್ಲಾ ಬ್ಯಾಂಕ್‌ಗಳಿಂದ ಪ್ರಸ್ತಾವನೆ (Expression of interest) ಪಡೆದು ಹೆಚ್ಚು ಬಡ್ಡಿ ನೀಡುವ ಹಾಗೂ ಉತ್ತಮವಾದ ಸೌಲಭ್ಯಗಳನ್ನು ನೀಡುವ ಬ್ಯಾಂಕಿನಲ್ಲಿ ಖಾತೆ ತೆರೆಯುವಂತೆ ತೀರ್ಮಾನಿಸಲಾಗಿತ್ತು. ಆದರೆ ಸಿಂಡಿಕೇಟ್ ಸಭೆಯಲ್ಲಿ ಆದಂತಹ ತೀರ್ಮಾನವೇ ಬೇರೆ, ನೀವು ನಡಾವಳಿಯಲ್ಲಿ ಸೇರಿಸಿರುವ ತೀರ್ಮಾನವೇ ಬೇರೆಯಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನಾನು ಹಲವು ಸಭೆಗಳಲ್ಲಿ ಸಿಂಡಿಕೇಟ್ ತೀರ್ಮಾನದ ಬಗ್ಗೆಯಾಗಲೀ ಚರ್ಚೆಯ ಬಗ್ಗೆಯಾಗಲೀ ಬೇರೆ ರೀತಿಯಲ್ಲಿ ಬರೆಯುತ್ತಿದ್ದೀರಿ ಎಂದು ತಿಳಿಸುತ್ತಾ ಬಂದಿದ್ದೇನೆ. ಆದರೂ ಈ ಸಲವೂ ಇದು ಪುನಾರವರ್ತನೆಯಾಗಿದೆ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ನೀವು ಲಿಖಿತ ಮೂಲಕ ಪತ್ರವನ್ನು ನೀಡಿದರೆ ಉತ್ತರಿಸುವುದಾಗಿ ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ಹಣಕಾಸು ಅಧಿಕಾರಿಗಳು ನೀವು ಒಂದೇ ತೆರನಾದ ನಿಲುವನ್ನು ತಳೆದಿರುವುದಿಲ್ಲ. ಬಜೆಟ್‌ಗೆ ಸಂಬಂಧಿಸಿದ ವಿಷಯಕ್ಕೆ ಮಾತನಾಡಿದರೆ, ಹಿಂದಿನ ಸಭೆಯಲ್ಲಿ ಒಂದು ವಿಷಯವನ್ನು ಮತ್ತೊಂದು ಸಭೆಯಲ್ಲಿ ಇನ್ನೊಂದು ವಿಷಯವನ್ನು ಮಾತನಾಡುತ್ತೀರಿ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಹಾಗೂ ಕರ್ನಾಟಕ ಸರ್ಕಾರದ ನಿಯಮಾವಳಿಯಂತೆ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ಬಹುತೇಕ ಎಲ್ಲಾ ಖಾತೆಗಳು ಎಸ್‌ಬಿಐನಲ್ಲೇ ಇವೆ. ಆದರೆ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್‌ನ ಕಾಲೇಜಿನ ಖಾತೆಯನ್ನು ಮಾತ್ರ ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ತೆರೆಯಲಾಗಿದೆ. ಎಸ್‌ಬಿಐ ಬ್ಯಾಂಕ್‌ನಲ್ಲಿ ಎಲ್ಲಾ ಸೌಕರ್ಯಗಳನ್ನು ನೀಡುವುದಾಗಿ ತಿಳಿಸುತ್ತಾರೆ, ಆದರೆ ಯಾವುದೇ ಸೌಲಭ್ಯವನ್ನು ಸರಿಯಾಗಿ ನೀಡುವುದಿಲ್ಲ. ಸರ್ಕಾರದ ನಿರ್ದೇಶನುಸಾರ ಎಸ್‌ಬಿಐ ನಲ್ಲೇ ಖಾತೆಯನ್ನು ತೆರೆಯಬೇಕಾಗಿದೆ. ಪಿಜಿ ಪ್ರವೇಶಾತಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ತುಂಬಾ ಅನಾನುಕೂಲಗಳು ಆಗುತ್ತಿವೆ ಎಂದು ಸಭೆಗೆ ತಿಳಿಸಿದರು. ಸೆಲ್ಫ್ ಫೈನಾನ್ಸ್ ಸ್ಕೀಂನಲ್ಲಿ ವಿದ್ಯಾರ್ಥಿಗಳು ಪ್ರವೇಶ ಶುಲ್ಕವನ್ನು ಪಾವತಿಸುವುದರಿಂದ ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆ ತೆರೆಯಲಾಗಿದೆ ಎಂದು ಸಭೆಗೆ ತಿಳಿಸಿದರು.

ಡಾ. ಸಿ. ಬಸವರಾಜು ಅವರು ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನಡೆದಂತಹ ಚರ್ಚೆಯನ್ನು ಸಭೆಗೆ ಮತ್ತೊಮ್ಮೆ ವಿವರಿಸಿ, ಬೇರೆ ಬ್ಯಾಂಕ್‌ಗಳಿಂದ ಮಾಹಿತಿಗಳನ್ನು ತರಿಸಿಕೊಂಡು, ಹೆಚ್ಚಿನ ಮೊತ್ತದ ಬಡ್ಡಿಯನ್ನು ನೀಡುವ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಬೇಕೆಂದು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆದಿರುವುದಕ್ಕೆ ಅನುಸಮರ್ಥನೆಯನ್ನು ನೀಡಿರುವುದಿಲ್ಲವೆಂದು ತಿಳಿಸಿದರು.

ಈ ವಿಷಯದ ಬಗ್ಗೆ ದೀರ್ಘವಾದ ಚರ್ಚೆ ನಡೆದ ನಂತರ ದಿನಾಂಕ: 27.11.2024ರಂದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪತ್ರವನ್ನು ನೀಡಿರುತ್ತೇವೆ. ಅದಕ್ಕೆ ಪ್ರತ್ಯುತ್ತರವಾಗಿ ಒಂದು ಉತ್ತರವೂ ಬಂದಿರುವುದಿಲ್ಲವೆಂದು ಸಿಂಡಿಕೇಟ್ ಸದಸ್ಯರುಗಳೆಲ್ಲರೂ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಯಾವುದೇ ಪತ್ರವನ್ನು ಕುಲಸಚಿವರಿಗೆ ನೀಡಿದಾಗ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿ ಮಾಹಿತಿಯನ್ನು ಸಂಗ್ರಹಿಸಿ ನಮಗೆ ನೀಡಬೇಕೆಂದು ತಿಳಿಸಿದರು.

ನಂತರ ಡಾ. ನಟರಾಜ್ ಹೆಚ್.ಎಸ್ ಅವರು ಮಾತನಾಡಿ, ಇಂದಿನ ಸಭೆಯಲ್ಲಿ ನೀವು ನೀಡಿರುವಂತಹ ಕಾರ್ಯಸೂಚಿಯ ಪ್ರಕಾರ ವಿಷಯವನ್ನು ಚರ್ಚಿಸುವುದೋ ಅಥವಾ ನಾವು ನಿಮಗೆ ಕಾರ್ಯಸೂಚಿಯಲ್ಲಿ

ಸೇರಿಸುವಂತೆ ಸಲ್ಲಿಸಿರುವ ಪತ್ರಗಳ ವಿಷಯವಾಗಿ ಚರ್ಚಿಸುವುದೋ ಎಂಬುದರ ಬಗ್ಗೆ ಮೊದಲು ತೀರ್ಮಾನವಾಗಬೇಕು. ಹಾಗೆಯೇ ನಾವುಗಳು ನೀಡಿದಂತಹ ವಿಷಯಗಳಲ್ಲಿ ಒಂದೂ ವಿಷಯವೂ ಸೇರ್ಪಡೆಯಾಗಿರುವುದಿಲ್ಲ. ನಮ್ಮ ಪತ್ರಗಳಿಗೆ ಇಷ್ಟರಮಟ್ಟಿಗೆ ಅಸಡ್ಡೆ ತೋರುವುದು ಎಷ್ಟರಮಟ್ಟಿಗೆ ಸರಿ ಎಂದು ಅಸಮಾಧಾನವನ್ನು ವ್ಯಕ್ತಪಡಿಸಿದರು. ಜೊತೆಗೆ ಡಾ. ಶಿಲ್ಪಾ ಜೆ ಅವರು ತಮ್ಮ ಅಹವಾಲನ್ನು ಸಹ ತಿಳಿಸಿದರು. ನಾವು ನೀಡಿದಂತಹ ಪತ್ರಕ್ಕೆ ತಮ್ಮಿಂದ ಇಲ್ಲಿಯವರೆಗೂ ಒಂದು ಪ್ರತ್ಯುತ್ತರವೂ ಬಂದಿರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳಾದ ತಾವುಗಳು ಕೋರುವ ಎರಡು ಮೂರು ವರ್ಷಗಳ ಮಾಹಿತಿಗಳನ್ನು ಒಂದೆರಡೇ ದಿನಗಳಲ್ಲಿ ನೀಡಿ ಎಂದರೆ ಸಾಧ್ಯವಾಗುವುದಿಲ್ಲ, ತಾವು ಯಾವ ವಿಷಯದ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಕೋರಿ, ಸಮಯವನ್ನು ನೀಡಿದ್ದಲ್ಲಿ ಮಾಹಿತಿಯನ್ನು ನೀಡಬಹುದು. ಆದರೆ 2003ರಿಂದ ಆಗಿರುವಂತಹ ಮಾಹಿತಿಗಳನ್ನು ತತ್‌ಕ್ಷಣವೇ ನೀಡಿ ಎಂದರೆ ಹೇಗೆ ನೀಡುವುದು ಎಂದು ಸಭೆಗೆ ತಿಳಿಸುತ್ತಾ, ಸಿಂಡಿಕೇಟ್ ಸಭೆಯ ದಿನಾಂಕ ನಿಗಧಿಯಾದ ಸಂದರ್ಭದಲ್ಲೇ ತಮ್ಮಗಳ ಪತ್ರವೇ ತುಂಬಾ ಇರುತ್ತದೆ. ಜೊತೆಗೆ ನನಗಾಗಲಿ, ಕುಲಸಚಿವರಿಗಾಗಲಿ, ಇತರೆ ಅಧಿಕಾರಿಗಳಿಗಾಗಲೀ ಒಂದೇ ಕೆಲಸವಿರುವುದಿಲ್ಲ. ಇಲ್ಲಿ ಅನೇಕ ರೀತಿಯ ಕರ್ತವ್ಯಗಳನ್ನು ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿರುತ್ತೇವೆ ಎಂದು ತಿಳಿಸಿದರು. ಜೊತೆಗೆ ತಮಗೆ ಯಾವುದೇ ಮಾಹಿತಿ ಬೇಕಾದ್ದಲ್ಲಿ ಕಛೇರಿಗೆ ಪತ್ರ ಬರೆದು ಮಾಹಿತಿಯನ್ನು ತೆಗೆದುಕೊಳ್ಳಬಹುದು ಎಂದು ತಿಳಿಸುತ್ತಾ, ಸದಸ್ಯರುಗಳಾದ ತಾವುಗಳು ಕೋರಿರುವ ಹಾಗೂ ಚರ್ಚಿಸಬೇಕೆಂದಿರುವ ವಿಷಯಗಳನ್ನು ಇತರೇ ವಿಷಯಗಳಲ್ಲಿ ಸೇರ್ಪಡೆಗೊಳಿಸಲಾಗಿದೆ ಎಂದು ತಿಳಿಸಿದರು.

ಮುಂದುವರೆದು ಮಾನ್ಯ ಕುಲಪತಿಗಳು, ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆ ತೆರೆದಿರುವ ಬಗ್ಗೆ ಮೊದಲಿಗೆ ಹಣಕಾಸು ನಿಯಮಾವಳಿಗಳ ಪ್ರಕಾರ ಹಾಗೂ ಆರ್‌ಬಿಐ ನಿಯಮಾವಳಿಗಳ ಪ್ರಕಾರ ಉತ್ತಮ ಶ್ರೇಯಾಂಕವನ್ನು ಹೊಂದಿರುವಂತಹ ಬ್ಯಾಂಕುಗಳಿಂದ ಮತ್ತು ಸದಸ್ಯರುಗಳು ತಿಳಿಸಿರುವಂತಹ ಬ್ಯಾಂಕ್‌ಗಳಿಂದ ಮಾಹಿತಿಗಳನ್ನು ತೆಗೆದುಕೊಂಡು ಯಾವ ಬ್ಯಾಂಕ್‌ನಿಂದ ಹೆಚ್ಚಿನ ಸೌಲಭ್ಯ ಹಾಗೂ ಆದಾಯ ದೊರಕಬಹುದು ಎಂದು ಪಟ್ಟಿಮಾಡಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗುವುದೆಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ ಎಸ್‌ಬಿಐ ಬ್ಯಾಂಕಿಗೆ ವಿದ್ಯಾರ್ಥಿಗಳ ಶುಲ್ಕವನ್ನು ಪಾವತಿಸುವ ಸಂಬಂಧ ಸಾಫ್ಟ್‌ವೇರ್‌ನ್ನು ಮಾಡಿಕೊಡುವಂತೆ ಕೋರಿದರೂ ಒಂದು ವರ್ಷ ಕಳೆದರೂ ಮಾಡಿಕೊಡಲಿಲ್ಲವೆಂದೂ ತಿಳಿಸಿದರು. ಕುಲಸಚಿವರು ಸದರಿ ವಿಷಯಕ್ಕೆ ದನಿಗೂಡಿಸಿದರು.

ನಂತರ ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಕೋಟಕ್ ಮಹೀಂದ್ರಾ ಬ್ಯಾಂಕ್‌ನಲ್ಲಿ ಶೇಕಡ 7.5ರಷ್ಟು ಬಡ್ಡಿಯನ್ನು ನೀಡುವುದರಿಂದ ಹಾಗೂ ನಾನು ಈಗಾಗಲೇ ಐಡಿಎಫ್‌ಸಿ ಬ್ಯಾಂಕ್ ಹಾಗೂ ಕೋಟಕ್ ಮಹೀಂದ್ರ ಬ್ಯಾಂಕ್‌ನ ಅಧಿಕಾರಿಗಳೊಂದಿಗೆ ಹಾಗೂ ಬೋರ್ಡ್‌ನ ಸದಸ್ಯರೊಂದಿಗೆ ಮಾತನಾಡಿ ಎಲ್ಲಾ ರೀತಿಯ ಮಾಹಿತಿಯನ್ನು ಪಡೆದಿದ್ದೇನೆ. ಆ ಬ್ಯಾಂಕಿನ ವಹಿವಾಟುಗಳು ಉತ್ತಮ ಗುಣಮಟ್ಟದ್ದಾಗಿರುವುದರಿಂದ, ಅವರಿಂದ ಮಾಹಿತಿಯನ್ನು ತೆಗೆದುಕೊಂಡು ಮುಂದುವರಿಯಬಹುದೆಂದು ಹಾಗೂ ವಿಶ್ವವಿದ್ಯಾನಿಲಯವನ್ನು ಆರ್ಥಿಕವಾಗಿ ಸಬಲಗೊಳಿಸುವ ನಿಟ್ಟಿನಲ್ಲಿ ಈ ಒಂದು ಕ್ರಮವನ್ನು ಕೈಗೊಳ್ಳಬಹುದೆಂದು ತಿಳಿಸಿದರು.

ನಂತರ ಮಾನ್ಯ ಕುಲಪತಿಗಳು ಮಾತನಾಡಿ, ಈಗಾಗಲೇ ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆದಿರುವುದರಿಂದ, ಪ್ರವೇಶಾತಿ ಶುಲ್ಕವು ಬ್ಯಾಂಕ್ ಖಾತೆಗೆ ಜಮಾ ಆದ ಮಾರನೇ ದಿನ ಎಸ್‌ಬಿಐ ಖಾತೆಗೆ ವರ್ಗಾಯಿಸುವಂತೆ ಹಣಕಾಸು ಅಧಿಕಾರಿಗಳಿಗೆ ಸೂಚಿಸಿದರು. ಸರ್ಕಾರವು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹಣವನ್ನು ಇಡಬೇಕೆಂದಿರುವುದರಿಂದ ಹಾಗೂ ಎಸ್‌ಬಿಐ ಖಾತೆಯಲ್ಲಿ ಹಣವನ್ನು ಇಡುವುದರಿಂದ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಸುರಕ್ಷತೆಯಿರುತ್ತದೆಂದು ತಿಳಿಸಿದರು. ಜೊತೆಗೆ ಆಡಿಟ್ ಆಕ್ಷೇಪಣೆಯು ಬರುವುದಿಲ್ಲವೆಂದು ಸಹ ತಿಳಿಸಿದರು.

**ತೀರ್ಮಾನ: ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ಖಾತೆಗೆ ಹಣ ಜಮಾ ಆದ ಮಾರನೆ ದಿನದಂದು ಎಸ್‌ಬಿಐ ಖಾತೆಗೆ ಹಣವನ್ನು ವರ್ಗಾಯಿಸುವಂತೆ ಹಾಗೂ ಹಣಕಾಸು ನಿಯಮಾವಳಿಗಳ ಪ್ರಕಾರ ಹಾಗೂ ಆರ್‌ಬಿಐ ನಿಯಮಾವಳಿಗಳ ಪ್ರಕಾರ ಉತ್ತಮ ಶ್ರೇಯಾಂಕವನ್ನು ಹೊಂದಿರುವಂತಹ ಬ್ಯಾಂಕುಗಳಿಂದ ಮತ್ತು ಸದಸ್ಯರುಗಳು ತಿಳಿಸಿರುವಂತಹ ಬ್ಯಾಂಕ್‌ಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ, ಯಾವ ಬ್ಯಾಂಕ್‌ನಿಂದ ಹೆಚ್ಚಿನ ಸೌಲಭ್ಯ/ಸೌಕರ್ಯ ಹಾಗೂ ಆದಾಯ ದೊರಕಬಹುದು ಎಂಬುದನ್ನು ಸವಿವರವಾಗಿ ಪಟ್ಟಿಮಾಡಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.**

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವಿಷಯ ಸಂಖ್ಯೆ: 2024/7.7ರ ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ C/o ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿದೆ. ಆದರೆ ವೋಗ್ ಇನ್ಸ್ಟಿಟ್ಯೂಟ್ ವಿಷಯದಲ್ಲಿ ಹಲವಾರು ದೋಷಗಳಿರುವುದನ್ನು ಹಿಂದಿನ ಸಭೆಯ ಗಮನಕ್ಕೆ ತರಲಾಗಿತ್ತು. ಆದರೆ ನಡಾವಳಿಯಲ್ಲಿ ಕೆಲವೊಂದು ಅಂಶಗಳನ್ನು ದಾಖಲಿಸಿದ್ದೀರಿ. ಅಂದು ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ಅಂಶಗಳನ್ನು ನಡಾವಳಿಯಲ್ಲಿ ದಾಖಲಿಸಬೇಕೆಂದು ಸಭೆಗೆ ತಿಳಿಸಿದರು.

ಕುಲಸಚಿವರು ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್ ವಿಷಯದ ಬಗ್ಗೆ ಚರ್ಚಿಸಿದ ಅಂಶಗಳನ್ನು ನಡಾವಳಿಯಲ್ಲಿ ದಾಖಲಿಸುವುದಾಗಿ ತಿಳಿಸಿದರು.

ದಿನಾಂಕ : 29.10.2024 ರಂದು ನಡೆದ ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್ C/o ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾ., ಮಂಡ್ಯ ಜಿಲ್ಲೆ ಇವರ ಸಂಸ್ಥೆಯ ಬಗ್ಗೆ ಚರ್ಚಿಸಿದ ವಿವರ:

ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಮೂರು ಸ್ನಾತಕೋತ್ತರ ಕೇಂದ್ರಗಳು ವಿಭಜನೆಗೊಂಡು ಮೂರು ಪ್ರತ್ಯೇಕ ವಿಶ್ವವಿದ್ಯಾನಿಲಯವಾಗಿರುವುದರಿಂದ, ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್‌ನ ಸಂಸ್ಥೆಯು ಮಂಡ್ಯ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವುದರಿಂದ, ಮೈಸೂರು ವಿಶ್ವವಿದ್ಯಾನಿಲಯದಿಂದ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡಲು ವಿಶ್ವವಿದ್ಯಾನಿಲಯಗಳ ಕಾಯ್ದೆ ಹಾಗೂ Statutesನಲ್ಲಿ ಅವಕಾಶವಿದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, Statutesನಲ್ಲಿ Specialized Programme ಅಡಿಯಲ್ಲಿ ರಾಜ್ಯಾದ್ಯಾಂತ ಕೋರ್ಸ್‌ಗಳನ್ನು ಪ್ರಾರಂಭಿಸಲು ಅವಕಾಶವಿದೆ. ಸರ್ಕಾರದ ಆದೇಶದಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿಯೇ Specialized Programmeನ್ನು ಪ್ರಾರಂಭಿಸುವಂತೆ ಬೆಂಗಳೂರಿನಲ್ಲಿ Specialized Programmeಗಳನ್ನು ಹೊಸದಾಗಿ ಪ್ರಾರಂಭಿಸಬಾರದೆಂದು ತಿಳಿಸಿದೆ. ಆದರೆ Outreach ಹಾಗೂ Specialized programmeನ ವಿಷಯಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದೆ, ಹಿಂದೆ ಇದ್ದಂತಹ ಅಧಿಕಾರಿಗಳು ಎಲ್ಲವನ್ನೂ ಸ್ಥಗಿತಗೊಳಿಸಿದ್ದಾರೆ/ನಿಲ್ಲಿಸಿದ್ದಾರೆ. ವಿಶ್ವವಿದ್ಯಾನಿಲಯಕ್ಕೆ ಇದರಿಂದ ಸುಮಾರು ರೂ.35.00 ಕೋಟಿ ಯಿಂದ ರೂ. 40.00 ಕೋಟಿವರೆಗೆ ಆದಾಯ ಕಡಿಮೆಯಾಗಿದೆ ಎಂದು ತಿಳಿಸಿದರು. ಮೈಸೂರು ವ್ಯಾಪ್ತಿಯಲ್ಲಿ ನಡೆಯುತ್ತಿರುವ Specialized Programmeಗಳ ಸಂಸ್ಥೆಯವರಿಗೆ ಇನ್ನೂ ಒಂದು ವರ್ಷದೊಳಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯೊಳಗೆ ಸಂಸ್ಥೆಯನ್ನು ಪ್ರಾರಂಭಿಸುವಂತೆ ಸೂಚಿಸಲಾಗಿದೆ. ಸದರಿ ವಿಷಯಕ್ಕೆ ಸಂಸ್ಥೆಗಳು ವಿಶ್ವವಿದ್ಯಾನಿಲಯದ ವ್ಯಾಪ್ತಿಯೊಳಗೆ ಬರಲು ಬದ್ಧವಾಗಿವೆ. ಮಂಡ್ಯ ವಿಶ್ವವಿದ್ಯಾಲಯದವರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ಗಮನಿಸಿ ಅದರ ಆಧಾರದ ಮೇಲೆ ಎಲ್ಲಾ ಸಂಸ್ಥೆಗಳನ್ನು ವಿಶ್ವವಿದ್ಯಾನಿಲಯಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಉನ್ನತ ಶಿಕ್ಷಣ ಸಚಿವರ ಹತ್ತಿರ ಸದರಿ ವಿಷಯದ ಬಗ್ಗೆ ಮಾತನಾಡಿದಾಗ ವಿಶ್ವವಿದ್ಯಾನಿಲಯದ ವ್ಯಾಪ್ತಿಯೊಳಗೆ ಬರುವಂತಹದರಲ್ಲಿಯೇ Specialized

Programme ಗಳನ್ನು ಪ್ರಾರಂಭಿಸಬೇಕು ಎಂದು ತಿಳಿಸಿದ್ದಾರೆ. ವಿಭಜನೆಯಾದ ಮೇಲೆ ಮಂಡ್ಯ ವ್ಯಾಪ್ತಿಯಲ್ಲಿ ಬರುವಂತಹ ಕಾಲೇಜುಗಳು ಅವರ ವ್ಯಾಪ್ತಿಗೆ ಬರುತ್ತದೆ ಅಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಗೌರವಾನ್ವಿತ ರಾಜ್ಯಪಾಲರಿಂದ ಅಂಕಿತಗೊಂಡಿರುವ Statutesನಲ್ಲಿ Specialized Programmeಅನ್ನು ಪ್ರಾರಂಭಿಸಲು ಅವಕಾಶವಿದೆ. ಜೊತೆಗೆ ಮಂಡ್ಯ/ಹಾಸನ/ಚಾಮರಾಜನಗರ ವಿಶ್ವವಿದ್ಯಾನಿಲಯಗಳಲ್ಲಿ Statutesಅನ್ನು ಮಾಡಿಕೊಳ್ಳಲು ಬೇಕಾದಂತಹ ಸೌಲಭ್ಯಗಳು ಸದ್ಯದ ಪರಿಸ್ಥಿತಿಯಲ್ಲಿ ಇಲ್ಲ. Specialized Programmeಗಳಿಗೆ Statutes ಬೇರೆ ಇದೆ. ಸಂಯೋಜಿತ ಕಾಲೇಜುಗಳ ಮಾನದಂಡ ಹಾಗೂ Specialized Programmeಗಳ ಮಾನದಂಡಗಳೇ ಬೇರೆ, Specialized Programmeನಲ್ಲಿ ಪೂರ್ಣ ಪ್ರಮಾಣದಲ್ಲಿ ವಿಶೇಷವಾದ, ಹೊಸತೆರನಾದ Courseಗಳರುತ್ತವೆ ಎಂದು ತಿಳಿಸಿದರು. Specialized Programmeಗಳು ಬೆಳಗ್ಗೆಯಿಂದ ಸಂಜೆಯವರೆಗೆ ನಡೆಸುವಂತಹ ಕೋರ್ಸ್‌ಗಳಲ್ಲ Job Oriented Course ಗಳಾಗಿರುತ್ತವೆ. ಬೇರೆಡೆಗೆ ಕರೆದುಕೊಂಡು ಹೋಗಿ Internship ಮಾಡಿಸುವಂತ ಅವಕಾಶವೂ ಸಹ ಇರುತ್ತದೆ ಎಂದು ತಿಳಿಸುತ್ತಾ, Specialized Programmeಗೂ ಕಾಲೇಜುಗಳಲ್ಲಿ ನಡೆಸುವಂತಹ ಕೋರ್ಸ್‌ಗಳ ಬಗ್ಗೆ ಸವಿವರವಾಗಿ ಸಭೆಗೆ ವಿವರಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವೋಗ್ ಇನ್ಸಿಟ್ಯೂಟ್ ಆಫ್ ಡಿಸೈನ್ C/o ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾ., ಮಂಡ್ಯ ಜಿಲ್ಲೆ ಎಂದು ನೀಡಿದ್ದೀರಿ. ಯುಜಿಸಿ ನಿಯಾಮವಳಿಗಳ ಪ್ರಕಾರ, ಮೂಲಭೂತ ಸೌಕರ್ಯಗಳು ಇರುವಂತಹ ಸಂಸ್ಥೆಗೆ ಕೋರ್ಸ್‌ನ್ನು ಪ್ರಾರಂಭಿಸಲು ಅವಕಾಶ ನೀಡಬೇಕೇ ಹೊರತು C/o ವಿಳಾಸವನ್ನು ನೀಡಿರುವ ಸಂಸ್ಥೆಗೆ ಕೋರ್ಸ್‌ನ್ನು ನಡೆಸಲು ಅವಕಾಶ ನೀಡಬಹುದೇ ಎಂದು ಕೇಳಿದರು.

ಶ್ರೀ ಮಹಾದೇಶು ಅವರು ಮಾತನಾಡಿ, ವೋಗ್ ಇನ್ಸಿಟ್ಯೂಟ್ ಆಫ್ ಡಿಸೈನ್ ಸಂಸ್ಥೆಗೆ ಭೇಟಿ ನೀಡಿದ್ದು, ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಲಾಗಿದೆ. ತಂತ್ರಜ್ಞಾನದ ಮಾಹಿತಿ ಅಥವಾ ಆನ್‌ಲೈನ್ ಮುಖಾಂತರವೂ Specialized Programme ಅನ್ನು ನಡೆಸಬಹುದಾಗಿರುವುದರಿಂದ ಮಾನ್ಯತೆಯನ್ನು ನೀಡಲಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸ್ವಂತ ಕಟ್ಟಡವಿಲ್ಲದ, ಮೂಲಭೂತ ಸೌಕರ್ಯಗಳಿಲ್ಲದ ಸಂಸ್ಥೆಗೆ ಕೋರ್ಸ್‌ಗಳನ್ನು ನಡೆಸಲು ಅವಕಾಶ ನೀಡಬಹುದೆ, ಜೊತೆಗೆ C/o ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜುಗೂ ವೋಗ್ ಇನ್ಸಿಟ್ಯೂಟ್ ಆಫ್ ಡಿಸೈನ್ ಸಂಸ್ಥೆಗೂ ಇರುವ ಸಂಬಂಧ, ಕರಾರು ಮಾಡಿಕೊಂಡಿದ್ದರೆ, ಎಷ್ಟು ವರ್ಷಗಳ ಅವಧಿಗೆ ಮಾಡಿಕೊಂಡಿದ್ದಾರೆ ಎಂಬುದರ ಮಾಹಿತಿಯನ್ನು ನೀಡುವಂತೆಯೂ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, Specialized Programme ಗಳಿಗೆ ವರ್ಷ ವರ್ಷ ನವೀಕರಣ ಮಾಡಲಾಗುತ್ತದೆ. ಮೂರು ವರ್ಷಗಳಿಗೊಮ್ಮೆ ಸ್ಥಿರೀಕರಣವನ್ನು ಸಹ ಮಾಡಿಕೊಳ್ಳಲಾಗುತ್ತದೆ. MoU ಮತ್ತು Statutes ನಲ್ಲಿ ಕೋರ್ಸ್‌ಗಳು ನಡೆಸುವವರಿಗೆ ನೀತಿ ನಿಯಮಗಳನ್ನು ತಿಳಿಸಲಾಗಿದೆ. ನಿಯಮಗಳಿಗೆ ಬದ್ಧವಾಗಿ ಕೋರ್ಸ್‌ನ್ನು ಪ್ರಾರಂಭಿಸಲು ಅವಕಾಶ ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯೂ ಆಗುವುದಿಲ್ಲ, ಸಂಸ್ಥೆಯನ್ನು ಸ್ಥಾಪಿಸಿದವರು ಎಲ್ಲಿಯೂ ಓಡಿ ಹೋಗಲು ಅವಕಾಶವೂ ಇಲ್ಲವೆಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ, ವೋಗ್ ಇನ್ಸಿಟ್ಯೂಟ್ ಆಫ್ ಡಿಸೈನ್ ಸಂಸ್ಥೆಗೆ ಸ್ವಂತ ಕಟ್ಟಡವಿರುವುದಿಲ್ಲ, ಆದರೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುತ್ತಾರೆ. ಕೋರ್ಸ್ ಬಗ್ಗೆ ಮಾರ್ಕೆಟಿಂಗ್ ಮಾಡುತ್ತಾರೆ. ವಿದ್ಯಾರ್ಥಿಗಳಿಗೆ ಉದ್ಯೋಗಗಳು ಸಿಗುವ ನಿಟ್ಟಿನಲ್ಲಿ ಈ ಸಂಸ್ಥೆಗಳು Specialized Programme ಗಳ ಮುಖಾಂತರ ಕಾರ್ಯೋನ್ಮುಖರಾಗಿರುತ್ತಾರೆ ಎಂದು ಮತ್ತೊಮ್ಮೆ Specialized Programme ಬಗ್ಗೆ ವಿವರವನ್ನು ನೀಡಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್ ಯುಯುಸಿಎಂಎಸ್‌ನಲ್ಲಿ ನೋಂದಣಿಯಾಗಿದೆಯೇ, ನೋಂದಣಿಯಾಗಿಲ್ಲವೆಂದಲ್ಲಿ ಅವರಿಗೆ ಹೊಸ ಕೋರ್ಸ್‌ಗಳನ್ನು ನೀಡಲು ಅನುಮತಿ ನೀಡಲಾಗುವುದಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕೆಲವೊಂದು ಕೋರ್ಸ್‌ಗಳನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯಕ್ಕೆ ಅಧಿಕಾರವಿರುತ್ತದೆ. Specialized Programme ಗಳನ್ನು ಸೆಲ್ಫ್ ಫೈನಾನ್ಸ್ ಸ್ಕೀಂನಡಿಯಲ್ಲಿ ನಡೆಸಲಾಗುತ್ತದೆ. ಯುಯುಸಿಎಂಎಸ್‌ನಲ್ಲಿ ನಿರಂತರವಾಗಿ ನಡೆಯುವಂತಹ ಕೋರ್ಸ್‌ಗಳಿಗೆ ಮಾತ್ರ ಸೀಮಿತವಾಗಿರುತ್ತದೆ (ಉದಾಹರಣೆಗೆ ಬಿಎ., ಬಿ.ಕಾಂ., ಬಿಎಸ್ಸಿ) ಎಂದು ತಿಳಿಸುತ್ತಾ, ಯುಯುಸಿಎಂಎಸ್ ಹಾಗೂ Specialized Programme ಗಳ ಬಗ್ಗೆ ಮತ್ತೊಮ್ಮೆ ಸಭೆಗೆ ತಿಳಿಸಿದರು.

ಡಾ. ಆಂಥೋನಿ ಸಿ. ಪೌಲ್ ರಾಜ್ ಅವರು ದುಬೈನಲ್ಲಿ, ಜಮ್ಮುವಿನಲ್ಲಿ ಹಾಗೂ ಚೆನ್ನೈನಲ್ಲಿ ನಡೆಸಿರುವಂತಹ Specialized Programme ಗಳ ಬಗ್ಗೆ ಸಭೆಯಲ್ಲಿ ಮಾಹಿತಿಯನ್ನು ನೀಡುತ್ತಾ, ಮೌಲ್ಯಭವನವನ್ನು Outreach Programme ನಿಂದ ಬಂದಂತಹ ಹಣದಿಂದ ನಿರ್ಮಿಸಲಾಗಿದೆಯೆಂದು ಸಭೆಗೆ ತಿಳಿಸಿದರು. Specialized Programme ನ ಪರೀಕ್ಷಾ ಕಾರ್ಯವೈಖರಿ ಹಾಗೂ ಇನ್ನಿತರ ವಿಷಯಗಳ ಬಗೆಗೂ ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವಿಷಯ ಸಂಖ್ಯೆ: 2024/7.11ರ ದಿನಾಂಕ 18.07.2024ರಂದು ನಡೆದ ಕ್ರೀಡಾ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗಿನ ವಿಷಯದಲ್ಲಿ ನಾನು ಹಾಗೂ ಇತರೆ ಸದಸ್ಯರುಗಳು ಕೆಲವೊಂದು ಆಕ್ಷೇಪಣೆಗಳನ್ನು ಮಾಡಿದ್ದೆವು. ಜಿಎಸ್‌ಟಿ ಬಿಲ್‌ಗಳನ್ನು ನೀಡದಿರುವುದಕ್ಕೆ ಕುಲಸಚಿವರೇ ಅವರಿಗೆ ಖುದ್ದಾಗಿ ಎಚ್ಚರಿಕೆ ನೀಡಿರುತ್ತಾರೆ. ಸದರಿ ಸಮಿತಿ ಸಭೆಯಲ್ಲಿ ನಾನು ಇಲ್ಲದೆ ಇರುವುದರಿಂದ ಆ ಸಮಿತಿಯಲ್ಲಿ ಯಾವ ರೀತಿಯ ದುರ್ಬಳಕೆಯಾಗಿದೆ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೋರಿದರು.

ಶ್ರೀ ಮಹಾದೇಶು ಅವರು ಮಾತನಾಡಿ, ಕ್ರೀಡಾ ಸಮಿತಿ ಸಭೆಯಲ್ಲಿ ನಾನು ಒಬ್ಬ ಸದಸ್ಯನಾಗಿದ್ದು, ಸದರಿ ಸಭೆಯ ವರದಿಯ ಪ್ರಕಾರ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ. ಬದಲಾಗಿ ಅವರು ನೀಡಿದಂತಹ ಬಿಲ್‌ನಲ್ಲಿ ದೋಷವಿದ್ದಿರಬಹುದೆಂದು ತಿಳಿಸಿದರು.

ಡಾ. ಸಿ. ಬಸವರಾಜು ಅವರು ಮಾತನಾಡಿ, ಇತರೆ ವಿಷಯ 06ಕ್ಕೆ ಸಂಬಂಧಿಸಿದಂತೆ, ಸಿಂಡಿಕೇಟ್ ಸದಸ್ಯರುಗಳ ಆಸನ ಭತ್ಯೆಗೆ ಸಂಬಂಧಿಸಿದಂತೆ ವಿಷಯವನ್ನು ಪ್ರಸ್ತಾಪಿಸುತ್ತಾ, ವೇತನ ಭತ್ಯೆಗೆ ಸಂಬಂಧಿಸಿದ ವಿಷಯವನ್ನು ಕಾರ್ಯಸೂಚಿಯಲ್ಲಿ ಸೇರಿಸಿರಲಿಲ್ಲ. ಹಾಗೆಯೇ ಇತರೆ ವಿಷಯದಲ್ಲಿ ಸದರಿ ವಿಷಯವನ್ನು ಪ್ರಸ್ತಾಪಿಸಿದಾಗ, ಚರ್ಚೆಯೂ ಕೂಡ ನಡೆದಿರುವುದಿಲ್ಲವೆಂದು ತಿಳಿಸುತ್ತಾ, ಸಭೆಯಲ್ಲಿ ವಿಷಯವು ಚರ್ಚೆಯಾಗದೆ, ರೂ.7,000/-ಗಳಿಂದ ರೂ. 5,000/-ಗಳಿಗೆ ಸಭಾಭತ್ಯೆಯನ್ನು ನೀಡಲು ಸಭೆಯು ಅನುಮೋದನೆ ನೀಡಿದೆ ಎಂದು ನಡಾವಳಿಯಲ್ಲಿ ತಿಳಿಸಿದ್ದೀರಿ. ಇದು ಹೇಗೆ ಸಾಧ್ಯ? ದಿನಾಂಕ : 27.11.2024 ರಂದು ಸಭಾಭತ್ಯೆಗೆ ಸಂಬಂಧಿಸಿದಂತೆ ಪತ್ರವನ್ನು ಕುಲಸಚಿವರಿಗೆ ನೀಡಲಾಗಿದೆ. ಆದರೆ ಪತ್ರವನ್ನು ನೀಡಿದ ಮೂರು ದಿನಗಳಿಗೆ ವಿಶ್ವವಿದ್ಯಾನಿಲಯದಿಂದ ಸಿಂಡಿಕೇಟ್ ಸದಸ್ಯರುಗಳಿಗೆ ನೀಡುತ್ತಿದ್ದ ಸಭಾಭತ್ಯೆಯನ್ನು ರೂ.7,000/-ಗಳಿಂದ ರೂ. 5,000/-ಗಳಿಗೆ ನಿಗಧಿಪಡಿಸಲಾಗಿದೆ ಎಂದು ಆದೇಶವನ್ನು ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಲು ಸಾಧ್ಯವಿಲ್ಲ. ಹಾಗೆಯೇ ಎಲ್ಲಾ ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್ ಸದಸ್ಯರುಗಳಿಗೆ ನೀಡುತ್ತಿದ್ದ ಸಭಾಭತ್ಯೆಯ ತಾರತಮ್ಯವನ್ನು ಸರಿದೂಗಿಸಲು ಸರ್ಕಾರವು ಒಂದೇ ತೆರನಾದ ಸಭಾ ಭತ್ಯೆಯನ್ನು ನಿಗದಿಪಡಿಸಿದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಮಾನ್ಯ ಕುಲಪತಿಗಳಾದ ತಾವು ತೆಗೆದುಕೊಂಡಿರುವ ನಿರ್ಧಾರವನ್ನು ನಾವು ಸ್ವಾಗತಿಸುತ್ತೇವೆ. ಆದರೆ ಸಭೆಯಲ್ಲಿ ವಿಷಯವನ್ನು ಮಂಡಿಸದೆ, ಚರ್ಚೆಯೂ ಆಗದೆ, ನಡಾವಳಿಯಲ್ಲಿ ಸಿಂಡಿಕೇಟ್ ಸದಸ್ಯರುಗಳು ಅನುಮೋದನೆ ನೀಡಿರುತ್ತಾರೆ ಎಂದಿರುವ ವಿಷಯಕ್ಕೆ ನಮ್ಮ ಆಕ್ಷೇಪಣೆಯಿದೆ ಎಂದು ತಿಳಿಸಿದರು. ಶ್ರೀ ಮಹಾದೇಶು ಅವರು ಸದರಿ ವಿಷಯಕ್ಕೆ ದನಿಗೂಡಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಸಭಾಭತ್ಯೆಗೆ ಸಂಬಂಧಿಸಿದಂತೆ ದಿನಾಂಕ: 27.11.2024 ರಂದು ಪತ್ರವನ್ನೂ ನೀಡಿದ್ದಾಗ್ಯೂ ದಿನಾಂಕ: 30.11.2024 ರಂದು ಸಿಂಡಿಕೇಟ್ ಸದಸ್ಯರುಗಳ ಸಭಾಭತ್ಯೆಯನ್ನು ರೂ.7,000/-ಗಳಿಂದ ರೂ. 5,000/-ಗಳಿಗೆ ಕಡಿತಗೊಳಿಸಲಾಗಿದೆ ಎಂದು ಆದೇಶವನ್ನು ನೀಡುವುದು ಎಷ್ಟರ ಮಟ್ಟಿಗೆ ಸರಿ ಎಂದು ಕೇಳಿದರು.

ಡಾ. ಬಸವರಾಜು ಸಿ. ಅವರು ಇತರೆ ವಿಷಯಗಳಲ್ಲಿ ಸದರಿ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡುತ್ತಾ, ಕಳೆದ ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಗಿದೆ. ಈ ಸಂಬಂಧ ಸರ್ಕಾರವು ಸುತ್ತೋಲೆಯನ್ನು ಹೊರಡಿಸಿದ್ದು ಅದರಲ್ಲಿ ಯಾವುದೇ ರಾಜ್ಯೋತ್ಸವದ ಆಚರಣೆಯಾಗಲಿ, ಸ್ವಾತಂತ್ರ್ಯ ದಿನಾಚರಣೆಯಾಗಲಿ ರಜೆಯನ್ನೂ ನೀಡಿದ್ದರೂ ಸಹ ನಿಗದಿತ ದಿನದಂದೇ ಆಚರಣೆಗಳನ್ನು ಮಾಡಬೇಕಾಗುತ್ತದೆ. ಆದರೆ ಕನ್ನಡ ರಾಜ್ಯೋತ್ಸವವನ್ನು ದಿನಾಂಕ 7.11.2024 ರಂದು ಆಚರಿಸಿದ್ದಕ್ಕೆ ಕಾರಣವೇನೆಂದು ಕೇಳಿದರು.

ಶ್ರೀ ಮಹಾದೇಶು ಅವರು ಮಾತನಾಡಿ, ಕನ್ನಡ ರಾಜ್ಯೋತ್ಸವದ ಬಗ್ಗೆ ಮಾನ್ಯ ಕುಲಪತಿಯವರನ್ನು ಕೇಳಿದಾಗ, ಅಂದು ರಜೆಯಿರುವುದರಿಂದ, ವಿದ್ಯಾರ್ಥಿಗಳಾಗಲಿ, ಬೋಧಕ/ಬೋಧಕೇತರ ಸಿಬ್ಬಂದಿಗಳಾಗಲಿ ಸಂಪೂರ್ಣವಾಗಿ ಹಾಜರಿರುವುದಿಲ್ಲ. ಇಂತಹ ಸಂದರ್ಭದಲ್ಲಿ ನಾವು ಉತ್ಸವವನ್ನು ಆಚರಣೆ ಮಾಡಿದಾಗ ಸಭಾಂಗಣವೂ ಖಾಲಿಯಿರುತ್ತದೆ, ಸಭಾಂಗಣವು ತುಂಬಿದ್ದರೆ ಅದಕ್ಕೆ ಘನತೆಯೂ ಹೆಚ್ಚಾಗುತ್ತದೆ ಎಂದು ತಿಳಿಸಿದರು. ಸದರಿ ವಿಷಯಕ್ಕೆ ಡಾ. ಹೆಚ್.ಸಿ. ನಟರಾಜು ಅವರು ಶ್ರೀ ಮಹಾದೇಶು ಅವರ ಮಾತಿಗೆ ದನಿಗೂಡಿಸುತ್ತಾ, ನಾನು ವಿದ್ಯಾರ್ಥಿಗಳ ಸಂಘದ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ನನಗೂ ಇದರ ಅನುಭವವಿದೆ. ಉತ್ತಮ ವಾಗ್ಮಿಗಳೂ ಹಾಗೂ ಖ್ಯಾತನಾಮರನ್ನು ಕರೆಸಿ, ಕಾರ್ಯಕ್ರಮದಲ್ಲಿ ಜನರೇ ಇಲ್ಲದಿದ್ದರೆ ಅಭಾಸವಾಗುತ್ತದೆ. ಆದ್ದರಿಂದ ಬೇರೆ ದಿನ ಆಚರಿಸಿರುವುದು ತಪ್ಪೇನಿಲ್ಲವೆಂದರು. ಇದಕ್ಕೆ ಇನ್ನಿತರ ಸದಸ್ಯರುಗಳು ದನಿಗೂಡಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಲ್ಲದಿದ್ದರೂ, ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಎಲ್ಲಾ ಸಿಬ್ಬಂದಿ ವರ್ಗದವರೂ ಭಾಗವಹಿಸಲೇಬೇಕೆಂದು ಒಂದು ಸುತ್ತೋಲೆಯನ್ನು ಹೊರಡಿಸುವಂತೆ ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ನಾನು ವಿಶ್ವವಿದ್ಯಾನಿಲಯದವನೇ ಆಗಿದ್ದು, ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನವೆಂಬರ್ ಮಾಹೆಯಲ್ಲಿ ಯಾವುದೋ ಒಂದು ದಿನ ಸಾಹಿತಿಗಳನ್ನು ಕರೆಸಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಿದ್ದರು. ಆದರೆ 108 ವರ್ಷಗಳು ಕಳೆದ ನಂತರ ಮಾನ್ಯ ಕುಲಪತಿಗಳು ದೊಡ್ಡಮಟ್ಟದಲ್ಲಿ ಕ್ರಾಫರ್ಡ್‌ಭವನದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಿರುವ ಕ್ರಮವನ್ನು ಸಿಂಡಿಕೇಟ್ ಸದಸ್ಯರುಗಳಾದ ನಾವು ಅಭಿನಂದಿಸುವುದರ ಜೊತೆಗೆ ಶ್ಲಾಘಿಸೋಣವೆಂದರು.

ನಂತರ ಮಾನ್ಯ ಕುಲಪತಿಗಳು ಮಾತನಾಡಿ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಕ್ರಾಫರ್ಡ್‌ಭವನದಲ್ಲೇ ಆಚರಿಸಬೇಕೆಂಬ ಉದ್ದೇಶದಿಂದ ಈ ಬಾರಿ ದಿನಾಂಕ: 7.11.2024 ರಂದು ಆಚರಿಸಲಾಗಿದೆ. ನಿಗದಿತ ದಿನದಂದು ಸಾಹಿತಿಗಳಾಗಲಿ ವಿದ್ವಾಂಸರಾಗಲಿ ಸಿಗುವುದು ವಿರಳ, ಡಾ. ನಾಗತಿಹಳ್ಳಿ ಚಂದ್ರಶೇಖರ್ ಅವರನ್ನು ವಿಚಾರಿಸಲಾಗಿ, ಅವರು ಸಮ್ಮತಿ ನೀಡಿದಂತಹ ದಿನದಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲು ಕ್ರಮಕೈಗೊಳ್ಳಲಾಯಿತು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಯಾವುದೇ ಸಮಾರಂಭವಾಗಲಿ, ಕಾರ್ಯಕ್ರಮವಾಗಲಿ, ಪ್ರೋಟೋಕಾಲ್ ಪ್ರಕಾರ ನಡೆಯಬೇಕು ಎಂಬುದರ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ಸಭೆಗೆ ತಿಳಿಸಿದರು. ಜೊತೆಗೆ ಸಿಂಡಿಕೇಟ್ ಸದಸ್ಯರುಗಳಿಗೆ ವೇದಿಕೆಯ ಮೇಲೆ ಅಥವಾ ನಿಗಧಿತ ಸ್ಥಳದಲ್ಲಿ ಕೂರುವ ವ್ಯವಸ್ಥೆ ಮಾಡಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಇದು ರಾಜಕೀಯ ಕಾರ್ಯಕ್ರಮಗಳಂತಲ್ಲ, ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳಿಗೂ ರಾಜಕೀಯ ಕಾರ್ಯಕ್ರಮಗಳಿಗೂ ತುಂಬಾ ವ್ಯತ್ಯಾಸವಿರುತ್ತದೆ. ಹಿಂದಿನಿಂದ ನಡೆದುಬಂದಿರುವ ನೀತಿ ನಿಯಮಗಳನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಕಳೆದ ಸಭೆಯಲ್ಲಿ ಸಿಂಡಿಕೇಟ್‌ನ Statutes ಬಗ್ಗೆ ಸಾಕಷ್ಟು ಚರ್ಚೆ ನಡೆಸಿ, ನಡಾವಳಿಯಲ್ಲೂ ಸಹ ದಾಖಲು ಮಾಡಿದ್ದೀರಿ. ಎಂಟು ಜನ ಸಿಂಡಿಕೇಟ್ ಸದಸ್ಯರುಗಳ ಪರವಾಗಿ ಈ ವಿಷಯವನ್ನು ತಮ್ಮ ಮುಂದೆ ಪ್ರಸ್ತುತ ಪಡಿಸುತ್ತಿರುವುದಾಗಿ ತಿಳಿಸಿ, ಸಿಂಡಿಕೇಟ್ ಅಧಿಕಾರಗಳ ಬಗ್ಗೆ ತಾವಾಗಲೀ, ಕಾರ್ಯದರ್ಶಿಗಳಾಗಲಿ ಅಥವಾ ನನಗೆ ಓದಲು ಅವಕಾಶ ನೀಡಿದ್ದಲ್ಲಿ ಓದುತ್ತೇನೆ ಎಂದು ತಿಳಿಸುತ್ತಾ, ಕಾರಣ ಸಿಂಡಿಕೇಟ್‌ನ ಅಧಿಕಾರ ಕೇವಲ ಸಿಂಡಿಕೇಟ್‌ನ ಪುಸ್ತಕದಲ್ಲಿ ಮತ್ತು ಕಾನೂನು ವ್ಯಾಪ್ತಿಗೆ ಸೀಮಿತಗೊಂಡಿದೆ. ಆದ್ದರಿಂದ ಸಿಂಡಿಕೇಟ್ ಅಧಿಕಾರಗಳ ಬಗ್ಗೆ ನಡಾವಳಿಯಲ್ಲಿ ದಾಖಲು ಮಾಡಬೇಕಾಗಿರುವುದರಿಂದ ಓದಲು ಅವಕಾಶ ಮಾಡಿಕೊಡುವಂತೆ ತಿಳಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 29 ಸಿಂಡಿಕೇಟಿನ ಅಧಿಕಾರಗಳು 1, 2 (ಎ) ರಿಂದ (ಡಬ್ಲ್ಯೂ) ವರೆಗೆ ಹಾಗೂ 3ಅನ್ನು ನಡಾವಳಿಯಲ್ಲಿ ದಾಖಲಿಸಲು ತಿಳಿಸಿದರು.

**29. ಸಿಂಡಿಕೇಟಿನ ಅಧಿಕಾರಗಳು :** (1) ಸಿಂಡಿಕೇಟು, ವಿಶ್ವವಿದ್ಯಾನಿಲಯದ ನಿಧಿಗಳ ಮತ್ತು ಸ್ವತ್ತುಗಳ ನಿರ್ವಹಣೆಯ ಮತ್ತು ವಿಶ್ವವಿದ್ಯಾನಿಲಯದ ವ್ಯವಹಾರಗಳ ಆಡಳಿತದ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಹಿಂದೆ ಹೇಳಿದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಸಿಂಡಿಕೇಟು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ವಿಶ್ವವಿದ್ಯಾನಿಲಯದ ಹಣಕಾಸು ಮತ್ತು ಎಲ್ಲ ಇತರ ಆಡಳಿತಾತ್ಮಕ ವ್ಯವಹಾರಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು ಮತ್ತು ಆ ಉದ್ದೇಶಕ್ಕಾಗಿ ತಾನು ಅವಶ್ಯಕ ಹಾಗೂ ಸೂಕ್ತವೆಂದು ಭಾವಿಸಬಹುದಾದ ಅಂಥ ಏಜೆಂಟರನ್ನು ನೇಮಕ ಮಾಡುವುದು;

(ಬಿ) ವಿಶ್ವವಿದ್ಯಾನಿಲಯದ ಪರವಾಗಿ ಕರಾರುಗಳನ್ನು ಮಾಡಿಕೊಳ್ಳುವುದು, ವ್ಯತ್ಯಸ್ತಗೊಳಿಸುವುದು, ಕಾರ್ಯಗತಗೊಳಿಸುವುದು ಮತ್ತು ರದ್ದುಗೊಳಿಸುವುದು;

(ಸಿ) 34ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಪರೀಕ್ಷಕರು ಮತ್ತು ಮಾಡರೇಟರುಗಳನ್ನು ನೇಮಕಮಾಡುವುದು ಮತ್ತು ಅವಶ್ಯವೆನಿಸಿದರೆ ಅವರನ್ನು ಬದಲಾಯಿಸುವುದು ಅಥವಾ ತೆಗೆದು ಹಾಕುವುದು ಹಾಗೂ ಅವರ ಫೀಜುಗಳು, ಉಪಲಬ್ಧಿಗಳು ಮತ್ತು ಪ್ರವಾಸ ಮತ್ತು ಇತರ ಭತ್ಯಗಳನ್ನು ಸಹ ನಿಗದಿಪಡಿಸುವುದು;

(ಡಿ) ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ನಿಯಮಿಸಲಾದ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡುವುದು;

(ಇ) ವಿಶ್ವವಿದ್ಯಾನಿಲಯದ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಸ್ವೀಕರಿಸುವುದು, ಆರ್ಜಿಸುವುದು, ಧಾರಣ ಮಾಡುವುದು, ನಿಯಂತ್ರಿಸುವುದು ಮತ್ತು ಆಡಳಿತ ನಡೆಸುವುದು ಮತ್ತು ವಿಶ್ವವಿದ್ಯಾನಿಲಯದ ನಿಧಿಗಳನ್ನು ಸೂಕ್ತ ಯೋಜನೆಗಳಲ್ಲಿ ವಿವೇಕಯುತವಾಗಿ ತೊಡಗಿಸುವುದು;

(ಎಫ್) ವಿಶ್ವವಿದ್ಯಾನಿಲಯದ ನಿಧಿಗಳು ಮತ್ತು ಸ್ವತ್ತುಗಳಿಗೆ ಸಂಬಂಧಿಸಿದ ಸರಿಯಾದ ಲೆಕ್ಕಪತ್ರಗಳನ್ನು ಇಡುವಂತೆ ಮಾಡುವುದು;

(ಜಿ) ಈ ಮುಂದಿನವುಗಳಿಗಾಗಿ ಫೀಜುಗಳನ್ನು ವಿಧಿಸುವುದು ಮತ್ತು ವಸೂಲಿ ಮಾಡುವುದು;

(i) ಪಾಠ ಮತ್ತು ಸಂಶೋಧನೆ;

(ii) ಪರೀಕ್ಷೆಗಳು ಮತ್ತು ಘಟಿಕೋತ್ಸವಗಳಿಗೆ ಪ್ರವೇಶ;

(iii) ವಿಶ್ವವಿದ್ಯಾನಿಲಯವು ಕೈಗೊಳ್ಳಬಹುದಾದಂತೆ ಅಂಥ ಇತರ ಸೇವೆಗಳು;

(iv) ಕಾಲೇಜುಗಳ ಸಂಯೋಜನೆ ಮತ್ತು ಪರಿವೀಕ್ಷಣೆ;

(v) ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ಉದ್ದೇಶಗಳು;

(ಹೆಚ್) ವಿಶ್ವವಿದ್ಯಾನಿಲಯದ ಹಣಕಾಸು ಅಂದಾಜುಗಳನ್ನು ತಯಾರಿಸುವುದು ಮತ್ತು ಅದನ್ನು ವಿದ್ಯಾವಿಷಯಕ ಪರಿಷತ್ತಿಗೆ ಒಪ್ಪಿಸುವುದು;

(ಐ) ವಿಶ್ವವಿದ್ಯಾನಿಲಯವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಗ್ರಂಥಾಲಯಗಳು, ಪ್ರಯೋಗ ಶಾಲೆಗಳು, ವಸ್ತು ಸಂಗ್ರಹಾಲಯಗಳು ಮತ್ತು ಇತರ ಸಂಸ್ಥೆಗಳ ಆಡಳಿತ ಮತ್ತು ನಿಯಂತ್ರಣ ಕೈಗೊಳ್ಳುವುದು;

(ಜೆ) ಕಾಲೇಜುಗಳ ಸಂಯೋಜನೆಯ ಸಂಬಂಧದಲ್ಲಿ ಪ್ರವೇಶ ನೀಡುವುದಕ್ಕಾಗಿ ಶಿಫಾರಸ್ಸುಗಳನ್ನು ಮಾಡುವುದು;

(ಕೆ) ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಇಲ್ಲದಿರುವ ವಿದ್ಯಾರ್ಥಿನಿಲಯಗಳನ್ನು ಮನ್ನಣೆ ನೀಡುವುದು ಮತ್ತು ಅಂಥ ಮನ್ನಣೆಯನ್ನು ಅಮಾನತ್ತುಗೊಳಿಸುವುದು ಅಥವಾ ಹಿಂತೆಗೆದುಕೊಳ್ಳುವುದು;

(ಎಲ್) ಕ್ಯಾಂಪಸ್ ಮತ್ತು ಅದರ ಅನೆಕ್ಸ್‌ಗಳೊಳಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹಾಗೂ ಅವರ ಆರೋಗ್ಯ ಮತ್ತು ಯೋಗಕ್ಷೇಮವನ್ನು ವೃದ್ಧಿಗೊಳಿಸಲು ವ್ಯವಸ್ಥೆ ಮಾಡುವುದು;

(ಎಮ್) ಉದ್ಯೋಗ ವಿಭಾಗ (ಬ್ಯೂರೋ) ಮತ್ತು ವಾರ್ತಾ ವಿಭಾಗವನ್ನು ರಚಿಸುವುದು, ಮತ್ತು ಅವುಗಳ ಕಾರ್ಯನಿರ್ವಹಣೆಯ ನಿಯಂತ್ರಣ ಮಾಡುವುದು;

(ಎನ್) ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ತನ್ನ ಪ್ರಕಾರ್ಯಗಳನ್ನು ಕುಲಪತಿಗೆ ಪ್ರತಿಯೋಜಿಸುವುದು;

(ಒ) ವಿಶ್ವವಿದ್ಯಾನಿಲಯಕ್ಕಾಗಿ ಸಾಮಾನ್ಯ ಮುದ್ರೆಯನ್ನು ಆಯ್ಕೆ ಮಾಡುವುದು ಮತ್ತು ಅದರ ಅಭಿರಕ್ಷೆ ಮತ್ತು ಉಪಯೋಗಕ್ಕಾಗಿ ಉಪಬಂಧಿಸುವುದು;

(ಪಿ) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಕಾನೂನು ವ್ಯವಹರಣೆ ನಡೆಸಲು ವ್ಯವಸ್ಥೆ ಮಾಡುವುದು;

(ಕ್ಯೂ) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾನಿಲಯವು ಅಗತ್ಯ ಪಡಿಸಿದ ಪ್ರಾಧ್ಯಾಪಕರ, ಉಪನ್ಯಾಸಕರ ಅಥವಾ ಶಿಕ್ಷಕರ ಯಾವುದೇ ಇತರ ಹುದ್ದೆಗಳನ್ನು ಸ್ಥಾಪಿಸುವುದು;

(ಆರ್) ವಿದ್ಯಾವಿಷಯಕ ಪರಿಷತ್ತಿನ ಹುದ್ದೆಗಳನ್ನು ಸ್ಥಾಪಿಸುವುದು;

(ಆರ್) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಫೆಲೋಶಿಪ್‌ಗಳು, ಸಂಚಾರಿ ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು;

(ಎಸ್) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸಿನ ಮೇಲೆ ಗೌರವ ಪದವಿಗಳು, ಬಿರುದುಗಳು ಅಥವಾ ಇತರೆ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(ಟಿ) ಪರಿನಿಯಮಗಳನ್ನು ರಚಿಸುವುದು, ಅವುಗಳ ತಿದ್ದುಪಡಿ ಮಾಡುವುದು ಮತ್ತು ನಿರಸನ ಗೊಳಿಸುವುದು;

(ಯು) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಪ್ರೊಫೆಸರ್ ಇಮೆರಿಟಸ್ (ವಿಶ್ರಾಂತ ಮಹೋಪಾಧ್ಯಾಯ) ಬಿರುದನ್ನು ಪ್ರದಾನ ಮಾಡುವುದು;

(ವಿ) ಹುದ್ದೆಗಳ ಸೃಜನೆಗಾಗಿ ಪರಿನಿಯಮಗಳನ್ನು ಮಾಡುವುದು;

(ಡಬ್ಲ್ಯೂ) ಈ ಅಧಿನಿಯಮ, ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ತನಗೆ ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು.

(3) (2)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಅಥವಾ ಅವರಿಗೆ ಯಾವುದೇ ಭತ್ಯೆಗಳನ್ನು ಅಥವಾ ಉಪಲಬ್ಧಿಗಳನ್ನು ನೀಡುವ ಅಧಿಕಾರವನ್ನು ಸಿಂಡಿಕೇಟಿಗೆ ಪ್ರದಾನ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ.

ನಂತರ, ಕುಲಸಚಿವರು ದಿನಾಂಕ: 21.12.2024ರ ಕಾರ್ಯಸೂಚಿಯನ್ನು ಮಂಡಿಸಿದರು.

| | |
|---|---|
| ಸಾಮಾನ್ಯ ಸಭೆ<br>2024/8.1 | 2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯವಾದ 81 ದಿನಸಿ ಪದಾರ್ಥಗಳನ್ನು ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಮೆ: ವಿನಾಯಕ ಎಂಟರ್‌ಪ್ರೈಸಸ್ ಚಾಮರಾಜನಗರ ಆಯ್ಕೆಗೊಂಡಿರುವ ಹಿನ್ನಲೆಯಲ್ಲಿ ಆದೇಶವನ್ನು ಹೊರಡಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| | ಪ್ರಸ್ತುತ ದಿನಸಿ ಪದಾರ್ಥಗಳಿಗೆ ಒಬ್ಬರು, ಆಹಾರ ಪದಾರ್ಥಗಳಿಗೆ (ತರಕಾರಿಗಳು/ ಸೊಪ್ಪುಗಳು/ ಹಣ್ಣುಗಳು/ ಹಾಲು ಮತ್ತು ಮೊಸರು/ಮೊಟ್ಟೆ ಮತ್ತು ಚಿಕನ್) ಒಬ್ಬರು ಮತ್ತು ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಬೇಕಾಗಿರುವ ಮುಖ್ಯ ಅಡುಗೆಯವರು, ಸಹಾಯಕರು ಹಾಗೂ ಹೆಲ್ಪರ್ಸ್‌ಗಳ ಸೇವೆಗೆ ಒಬ್ಬರು ಹೀಗೆ ಪ್ರತ್ಯೇಕವಾಗಿ ಟೆಂಡರ್‌ಗಳನ್ನು ಆಹ್ವಾನಿಸಿ ಆಯ್ಕೆಗೊಂಡಿರುವ ಟೆಂಡರ್‌ದಾರರಿಗೆ ಆದೇಶವನ್ನು ಹೊರಡಿಸಲಾಗುತ್ತಿದೆ. ಈ ರೀತಿಯಿಂದ ಹಲವಾರು ಸಂದರ್ಭಗಳಲ್ಲಿ ಭೋಜನ ಸಿದ್ಧಪಡಿಸುವಲ್ಲಿ ವ್ಯತ್ಯಯವುಂಟಾಗುವುದು ಮತ್ತು ಗುಣಮಟ್ಟದಲ್ಲೂ ದೂರುಗಳು ಬರುತ್ತದೆ. ಆದ್ದರಿಂದ ಈ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿದಲ್ಲಿ ಪ್ರತ್ಯೇಕವಾಗಿ ಟೆಂಡರ್ ಆಹ್ವಾನಿಸುವ ಬದಲು ಏಕೈಕ ಟೆಂಡರ್ ಆಹ್ವಾನಿಸಲು ಕ್ರಮವಹಿಸಲಾಗುವುದು ಎಂದು ಸಭೆಯ ಗಮನಕ್ಕೆ ತಂದರು.<br><br>ಡಾ. ಟಿ.ಆರ್.ಚಂದ್ರಶೇಖರ್, ಡಾ. ಬಸವರಾಜು.ಸಿ ಮತ್ತು ಡಾ. ನಟರಾಜು.ಹೆಚ್.ಎಸ್ ಅವರುಗಳು ವಿದ್ಯಾರ್ಥಿನಿಲಯದಲ್ಲಿರುವ ಸಮಸ್ಯೆಗಳನ್ನು ಹಾಗೂ ವಿವಿ ವಿದ್ಯಾರ್ಥಿನಿಲಯಗಳನ್ನು ಸುಧಾರಣೆ ತರಲು ಕೆಲವೊಂದು ಸಲಹೆಗಳನ್ನು ಸಭೆಯಲ್ಲಿ ಪ್ರಸ್ತಾಪಿಸುತ್ತಾ, ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿ ಸುಧಾರಣೆ ಮತ್ತು ಕೆಲವೊಂದು ಬದಲಾವಣೆ ತರಲು ಎಲ್ಲಾ ಸಿಂಡಿಕೇಟ್ ಸದಸ್ಯರುಗಳ ಸಹಕಾರವಿರುತ್ತದೆ ಎಂದು ಬೆಂಬಲ ಸೂಚಿಸಿದರು.<br><br>ಶ್ರೀ ನಾಗರಾಜು ಸಿ ಅವರು ಮಾತನಾಡಿ, ಆಹಾರದ ಗುಣಮಟ್ಟ ಕಳೆಪೆಯಾಗಿರುವುದರಿಂದ, ಟೆಂಡರ್‌ದಾರರಿಗೆ ನೋಟಿಸ್ ಜಾರಿಗೊಳಸಬೇಕೆಂದು ತಿಳಿಸಿದರು.<br><br>ಈ ಸಂಬಂಧ ಕುಲಪತಿಗಳು ಮಾತನಾಡಿ, ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ 80 ಇದ್ದರೆ 150 ಮಂದಿ ತಿಂಡಿ/ಊಟ ಮಾಡುತ್ತಿರುವುದು ಕಂಡುಬಂದಿದೆ. ಈ ಸಂಬಂಧ ಒಂದು ಸಮಿತಿಯನ್ನು ರಚಿಸಲಾಗುವುದು. ಸಮಿತಿಯು ವಿದ್ಯಾರ್ಥಿನಿಲಯಗಳಲ್ಲಿರುವ ವಾಸ್ತವಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿ, ಸುಧಾರಣೆ ತರಲು ತೆಗೆದುಕೊಳ್ಳಬಹುದಾದ ಕ್ರಮದ ವರದಿ ಸಿದ್ಧಪಡಿಸುವುದು ಮತ್ತು ಪ್ರವೇಶಾತಿ ಪಡೆದುಕೊಂಡಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಅನಧಿಕೃತವಾಗಿ ವಾಸ ಮಾಡುತ್ತಿರುವವರನ್ನು |

| | |
|---|---|
| | ಗುರುತಿಸಿ, ಅವರುಗಳನ್ನು ವಿದ್ಯಾರ್ಥಿನಿಲಯದಿಂದ ಹೊರ ಹಾಕುವುದು ಪ್ರಥಮ ಉದ್ದೇಶವಾಗಿರುತ್ತದೆ ಎಂದರು. |
| **ತೀರ್ಮಾನ** | **2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯವಾದ 81 ದಿನಸಿ ಪದಾರ್ಥಗಳನ್ನು ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ದಿನಾಂಕ 19-03-2024ರಿಂದ ಜಾರಿಗೆ ಬಂದಂತೆ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಮೆ: ವಿನಾಯಕ ಎಂಟರ್‌ಪ್ರೈಸಸ್ ಚಾಮರಾಜನಗರ ಇವರಿಗೆ ಆಡಳಿತಾತ್ಮಕ ಮಂಜೂರಾತಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/8.2 | 2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯ ಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯವಾದ 52 ಆಹಾರ ಪದಾರ್ಥಗಳನ್ನು (ತರಕಾರಿಗಳು/ ಸೊಪ್ಪುಗಳು/ ಹಣ್ಣುಗಳು/ ಹಾಲು ಮತ್ತು ಮೊಸರು/ಮೊಟ್ಟೆ ಮತ್ತು ಚಿಕನ್) ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಮೆ:ವಿನಾಯಕ ಎಂಟರ್‌ಪ್ರೈಸಸ್ ಚಾಮರಾಜನಗರ ಆಯ್ಕೆಗೊಂಡಿರುವ ಆದೇಶವನ್ನು ಹೊರಡಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ. |
| **ತೀರ್ಮಾನ** | **2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯವಾದ 52 ಆಹಾರ ಪದಾರ್ಥಗಳನ್ನು (ತರಕಾರಿಗಳು/ ಸೊಪ್ಪುಗಳು/ ಹಣ್ಣುಗಳು/ ಹಾಲು ಮತ್ತು ಮೊಸರು/ಮೊಟ್ಟೆ ಮತ್ತು ಚಿಕನ್) ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ದಿನಾಂಕ 13-06-2024ರಿಂದ ಜಾರಿಗೆ ಬಂದಂತೆ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಮೆ:ವಿನಾಯಕ ಎಂಟರ್‌ಪ್ರೈಸಸ್ ಚಾಮರಾಜನಗರ ಇವರಿಗೆ ಆಡಳಿತಾತ್ಮಕ ಮಂಜೂರಾತಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/6.3 | 2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯ ಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಬೇಕಾಗಿರುವ 39 ಮುಖ್ಯ ಅಡುಗೆಯವರು, 71 ಸಹಾಯಕರು ಹಾಗೂ 53 ಹೆಲ್ಪರ್ಸ್‌ಗಳ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಲು ಶ್ರೀ ಶಿವಣ್ಣ ಮೆ: ಕಾಂತಿ ಏಜೆನ್ಸಿ ನೆಟ್‌ವರ್ಕ್ಸ್, ಮೈಸೂರು ಸಂಸ್ಥೆಯು ಆಯ್ಕೆಗೊಂಡಿರುವ ಆದೇಶವನ್ನು ಹೊರಡಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ. |
| **ತೀರ್ಮಾನ** | **2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಬೇಕಾಗಿರುವ 39 ಮುಖ್ಯ ಅಡುಗೆಯವರು, 71 ಸಹಾಯಕರು ಹಾಗೂ 53 ಹೆಲ್ಪರ್ಸ್‌ಗಳ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಲು ದಿನಾಂಕ 13-06-2024ರಿಂದ ಜಾರಿಗೆ ಬಂದಂತೆ ಒಂದು ವರ್ಷದ ಅವಧಿಗೆ ಶ್ರೀ ಶಿವಣ್ಣ ಮೆ:ಕಾಂತಿ ಏಜೆನ್ಸಿ ನೆಟ್‌ವರ್ಕ್ಸ್, ಮೈಸೂರು ಇವರಿಗೆ ಆಡಳಿತಾತ್ಮಕ ಮಂಜೂರಾತಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/8.4 | 2022-23ನೇ ಸಾಲಿನಲ್ಲಿ ಆಹಾರ ಪದಾರ್ಥಗಳನ್ನು (ತರಕಾರಿಗಳು/ಸೊಪ್ಪುಗಳು/ ಹಣ್ಣುಗಳು/ ಹಾಲು/ಮೊಸರು/ಮೊಟ್ಟೆ ಮತ್ತು ಚಿಕನ್ ಇತ್ಯಾದಿ) ಸರಬರಾಜು ಮಾಡುತ್ತಿರುವ ಮೆ: ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರರವರಿಗೆ 17 ಆಹಾರ ಪದಾರ್ಥಗಳ ದರಗಳನ್ನು ಮರು ಪರಿಷ್ಕರಿಸಿ ವ್ಯತ್ಯಾಸದ ಮೊತ್ತವನ್ನು ಪಾವತಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| **ತೀರ್ಮಾನ** | **2022-23ನೇ ಸಾಲಿನಲ್ಲಿ ಆಹಾರ ಪದಾರ್ಥಗಳನ್ನು (ತರಕಾರಿಗಳು/ಸೊಪ್ಪುಗಳು/ಹಣ್ಣುಗಳು/ ಹಾಲು/ಮೊಸರು/ಮೊಟ್ಟೆ ಮತ್ತು ಚಿಕನ್ ಇತ್ಯಾದಿ) ಸರಬರಾಜು ಮಾಡುತ್ತಿರುವ ಮೆ.: ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರ ಇವರಿಗೆ 17 ಆಹಾರ ಪದಾರ್ಥಗಳ ದರಗಳನ್ನು ಮರು ಪರಿಷ್ಕರಿಸಿ ದಿನಾಂಕ 01-02-2024 ರಿಂದ 12-06-2024ರವರೆಗೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಇವರಿಗೆ ಆಡಳಿತಾತ್ಮಕ ಮಂಜೂರಾತಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |

| | |
|---|---|
| ಸಾಮಾನ್ಯ ಸಭೆ 2024/8.5 | ಡಾ. ಸುಧಾ ಬಿ.ಎಸ್., ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಅನುಮತಿ ನೀಡುವುದರ ಬಗೆಗೆ. |
| | ಕುಲಸಚಿವರು ಮಾತನಾಡಿ, ಡಾ. ಸುಧಾ ಬಿ.ಎಸ್., ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 26-01-2025 ರಿಂದ 03-03-2025 (37 ದಿನಗಳು) ಪಿಜಿ ಬಿಡುವನ್ನು, ದಿನಾಂಕ 03-03-2025 ರಿಂದ 25-03-2025ರವರೆಗೆ (22 ದಿನಗಳು) ಪರಿವರ್ತಿತ ರಜೆಯನ್ನು ಹಾಗೂ ದಿನಾಂಕ 25-03-2025 ರಿಂದ 25-04-2025ರವರೆಗೆ (31 ದಿನಗಳು) ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು ಒಟ್ಟು 90 ದಿನಗಳ ಕಾಲ ಸ್ವಂತ ಕೆಲಸದ ನಿಮಿತ್ತ ದಿನಾಂಕ 26-01-2025ರಿಂದ 25-04-2025ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಅನುಮತಿ ಕೋರಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>ಡಾ. ಚಂದ್ರಶೇಖರ್ ಹಾಗೂ ಡಾ. ಬಸವರಾಜು ರವರು ಮಾತನಾಡಿ, ದಿನಾಂಕ 26-01-2025ರಿಂದ 25-04-2025ರವರೆಗೆ ಅಮೇರಿಕ ದೇಶಕ್ಕೆ ಡಾ. ಸುಧಾ ಬಿ.ಎಸ್., ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತೆರಳಿದ್ದಲ್ಲಿ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುವುದಿಲ್ಲವೇ ಎಂದು ಕೇಳಿದರು.<br><br>ಕುಲಸಚಿವರು ಮಾತನಾಡಿ, ದಿನಾಂಕ 26-01-2025 ರಿಂದ 03-03-2025 ರವರೆಗೆ ತರಗತಿಗಳಿಗೆ ರಜೆಯಿದ್ದು, ಶೈಕ್ಷಣಿಕವಾಗಿ ಏನಾದರೂ ತೊಂದರೆಯಾಗುತ್ತದೆಯೇ ಎಂಬ ಬಗ್ಗೆ ಪ್ರಾಂಶುಪಾಲರಿಂದ ಸ್ಪಷ್ಟೀಕರಣ ಪಡೆದುಕೊಂಡಿದ್ದು ಹಾಗೂ ಪ್ರೊ.ಉಮೇಶ್‌ರವರು ಡಾ.ಸುಧಾ ಬಿ.ಎಸ್ ರವರ ಗೈರುಹಾಜರಿಯಲ್ಲಿ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತೇವೆಂದು ಹೇಳಿರುವುದಾಗಿ ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಡಾ. ಸುಧಾ ಬಿ.ಎಸ್ ರವರು sabbatical leave ಗಾಗಿ ಮನವಿ ಮಾಡಿಕೊಂಡಿದ್ದರು ಆದರೆ ತಾವು ಸಮ್ಮತಿ ಸೂಚಿಸದ ಕಾರಣ ಸದರಿಯವರು ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ಅಮೇರಿಕ ದೇಶಕ್ಕೆ ತೆರಳುತ್ತಿರುವುದಾಗಿ ಸಭೆಗೆ ತಿಳಿಸಿದರು. |
| ತೀರ್ಮಾನ | **ಡಾ. ಸುಧಾ ಬಿ.ಎಸ್., ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 26-01-2025ರಿಂದ 03-03-2025(37 ದಿನಗಳು) ಪಿಜಿ ಬಿಡುವನ್ನು, ದಿನಾಂಕ 03-03-2025ರಿಂದ 25-03-2025ರವರೆಗೆ (22 ದಿನಗಳು) ಪರಿವರ್ತಿತ ರಜೆಯನ್ನು ಹಾಗೂ ದಿನಾಂಕ 25-03-2025 ರಿಂದ 25-04-2025ರವರೆಗೆ (31 ದಿನಗಳು) ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು ಒಟ್ಟು 90 ದಿನಗಳ ಕಾಲ ಸ್ವಂತ ಕೆಲಸದ ನಿಮಿತ್ತ ದಿನಾಂಕ 26-01-2025ರಿಂದ 25-04-2025ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/8.6 | ಭೌತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ರ ಪ್ರಕಾರ ಪ್ರೊ. ಎ.ಪಿ.ಜ್ಞಾನಪ್ರಕಾಶ್, ಪ್ರಾಧ್ಯಾಪಕರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಭೌತಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ನಂತರ ಕ್ರಮವಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/8.7 | ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ನಟರಾಜ್ ಹೆಚ್.ಎಸ್.ರವರು ಮಾತನಾಡಿ, ಡಾ. ಮಮತಾ ರವರನ್ನು ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ನೇಮಕ ಮಾಡಬಾರದೆಂದು ತಮಗೆ ಶ್ರೀ ಆನಂದ ಎಂ ಕಲ್ಕೀ ಎಂಬುವವರಿಂದ ಬೆದರಿಕೆ ಪತ್ರ ಬಂದಿರುವುದಾಗಿ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ತಮ್ಮ ಹಾಗೂ ಮಾನ್ಯ ಕುಲಪತಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವುದಾಗಿ |

| | |
|---|---|
| | ಅಚಿತವಾಗಿ ತಿಳಿಸಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು. ಹಾಗೂ ಈ ಸಂಬಂಧ ಹಿಂಬರಹ ನೀಡಲಾಗಿದೆ ಎಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಶ್ರೀ ಆನಂದ ಎಂ ಕಲ್ಕೀ ರವರು ಡಾ. ಮಮತಾ ರವರು ಪಿಹೆಚ್.ಡಿ ಮಾಡಿರುವ ಬಗ್ಗೆ ಮಾಹಿತಿಯನ್ನು ಕೋರಿರುವುದಾಗಿ ತಿಳಿಸಿದರು.<br><br>ಡಾ.ಬಸವರಾಜು ಸಿ ರವರು ಮಾತನಾಡಿ, ಶ್ರೀ ಆನಂದ ಎಂ ಕಲ್ಕೀ ರವರು ಡಾ.ಮಮತಾರವರ ವಿರುದ್ಧ ವಿಶ್ವವಿದ್ಯಾನಿಲಯದಲ್ಲಿ ದೂರು ನೀಡಿದ್ದಲ್ಲಿ ತನಿಖೆ ನಡೆಸಲು ಕ್ರಮವಹಿಸಿ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಡಾ. ಮಮತಾರವರು ಪಿಹೆಚ್.ಡಿ ಮಾಡಿರುವುದು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆಗಿರುವುದರಿಂದ ಸದರಿ ಮಾಹಿತಿಯು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವುದಿಲ್ಲವೆಂದು ಸಭೆಗೆ ತಿಳಿಸಿದರು.<br><br>ಡಾ.ನಟರಾಜ್ ಹೆಚ್ ಎಸ್ ರವರು ಮಾತನಾಡಿ, ಶ್ರೀ ಆನಂದ ಎಂ ಕಲ್ಕೀ ರವರು ಡಾ.ಮಮತಾರವರ ಪಿಹೆಚ್.ಡಿಗೆ ಸಂಬಂಧಿಸಿದಂತೆ ಕೋರಿರುವ ಮಾಹಿತಿಗಳು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಿಲ್ಲವೆಂದು ತಿಳಿಸಿದರು.<br><br>ಡಾ. ಬಸವರಾಜು ಸಿ ರವರು ಮಾತನಾಡಿ, ಶ್ರೀ ಆನಂದ ಎಂ ಕಲ್ಕೀರವರ ತಿಳಿಸಿರುವಂತೆ, ಡಾ. ಮಮತಾ ರವರು ಸಲ್ಲಿಸಿರುವ ಮಹಾಪ್ರಬಂಧವು ತಪ್ಪಾಗಿದ್ದಲ್ಲಿ (ರಾಂಗ್) ದೂರನ್ನು ನಿರಾಕರಿಸಿದಂತಲ್ಲವೇ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಶ್ರೀ ಆನಂದ ಎಂ ಕಲ್ಕಿರವರು ಈಗಾಗಲೇ ಡಾ.ಮಮತ ಮತ್ತು ನಾಗೇಶ್ ವಿ ಬೆಟ್ಕೋಟೆ ಇವರ ವಿರುದ್ದ ಘನ ನ್ಯಾಯಾಲಯದಲ್ಲಿ ಪಿ.ಸಿ.ಆರ್ ಸಂಖ್ಯೆ:653/2024 ಮೊಕದ್ದಮೆಯನ್ನು ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ವಿಶ್ವವಿದ್ಯಾನಿಲಯವು ಪಕ್ಷಕಾರರಾಗಿರುವುದಿಲ್ಲ. ಸದರಿ ಪ್ರಕರಣವು ವಿಚಾರಣೆ ಹಂತದಲ್ಲಿರುವುದರಿಂದ ಘನ ನ್ಯಾಯಾಲಯವು ನೀಡುವ ತೀರ್ಪಿನ ಅನುಗುಣವಾಗಿ ನಿಯಮಾನುಸಾರ ಮುಂದಿನ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ರ ಪ್ರಕಾರ ಡಾ.ಎನ್.ಮಮತಾ, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 08-01-2025ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2024/8.8** | 2023-24ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು |
| | ಲೆಕ್ಕ ಪರಿಶೋಧನೆ ಮಾಡುವುದಕ್ಕೆ ಪೂರ್ವಭಾವಿಯಾಗಿ ವಾರ್ಷಿಕ ಲೆಕ್ಕಪತ್ರಗಳನ್ನು ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 47 (2) ರ ಪ್ರಕಾರ ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಗಳ ಮುಂದೆ ಮಂಡಿಸಿ ಅನುಮೋದನೆ ಪಡೆಯಬೇಕಾಗಿದ್ದು, ಈಗಾಗಲೇ ಸದರಿ ವಿಷಯವನ್ನು ದಿನಾಂಕ 19-10-2024ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಲಾಗಿದೆ ಎಂದು ತಿಳಿಸಿದರು. ಅದರನ್ವಯ 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ, ವಿಶ್ವವಿದ್ಯಾನಿಲಯದ ಕಾಯ್ದೆ 2000, ಪ್ರಕರಣ 32 (3) (i) ರನ್ವಯ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಮುಂದೆ ಪರಿಶೀಲನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿರುವುದಾಗಿ ಹಣಕಾಸು ಅಧಿಕಾರಿಗಳು ಸಭೆಯಲ್ಲಿ ವಿವರಿಸಿದರು. |
| **ತೀರ್ಮಾನ** | **2023-24ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2024/8.9** | ಶ್ರೀ ನಿಖಿಲ್‌ಗೌಡ ಜೆ., ಪರಿಚಾರಕ, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಶ್ರೀ ನಿಖಿಲ್‌ಗೌಡ ಜೆ., ಪರಿಚಾರಕ, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 01-02-2023ರಿಂದ ತಹಲ್‌ವರೆವಿಗೂ ಕಛೇರಿಗೆ ಅನಧಿಕೃತ ಗೈರುಹಾಜರಾಗಿದ್ದು, ಈ ಸಂಬಂಧ ಹಣಕಾಸು ಅಧಿಕಾರಿಗಳು ಸದರಿಯವರಿಗೆ ಮೆಮೋ ಜಾರಿ ಮಾಡಿರುತ್ತಾರೆ. ದಿನಾಂಕ 06-08-2024ರಂದು ಹಣಕಾಸು ಅಧಿಕಾರಿಗಳು ಟಿಪ್ಪಣಿಯನ್ನು ಕುಲಸಚಿವರಿಗೆ |

| | |
|---|---|
| | ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆಂದು ತಿಳಿಸಿದರು. ಅದರಂತೆ ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕಾರ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಆರೋಪಣಾ ಮತ್ತು ದೋಷರೋಪಣಾ ಪಟ್ಟಿಯನ್ನು ಸಿದ್ಧಪಡಿಸಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿರುವುದಾಗಿ ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಶ್ರೀ ನಿಖಿಲ್‌ಗೌಡ ರವರು ಖಾಯಂ ಉದ್ಯೋಗಿಯೇ ಎಂದು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಶ್ರೀ ನಿಖಿಲ್‌ಗೌಡರವರು ಅನುಕಂಪದ ಆಧಾರದ ಮೇಲೆ ಖಾಯಂ ಉದ್ಯೋಗಿಯಾಗಿ ನೇಮಕಗೊಂಡಿರುವುದಾಗಿ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಸದರಿಯವರು ಖಾಯಂ ಉದ್ಯೋಗಿಯಾಗಿರುವುದರಿಂದ ಸಿಸಿಎ ಅಧಿನಿಯಮ 1983 ಅನ್ವಯವಾಗುತ್ತದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಸದರಿ ಉದ್ಯೋಗಿಗೆ ಪತ್ರಗಳನ್ನು ಬರೆದಿರುವಿರಾ ಎಂದು ಕೇಳಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸದರಿ ಉದ್ಯೋಗಿಯು ಕರ್ತವ್ಯಕ್ಕೆ ಗೈರುಹಾಜರಾಗಿರುವುದರಿಂದ ಅವರಿಗೆ ಮೊದಲನೇ ನೋಟಿಸ್ ಯಾವಾಗ ಜಾರಿ ಮಾಡಿರುತ್ತೀರಾ ಎಂದು ಹಣಕಾಸು ಅಧಿಕಾರಿಗಳಿಗೆ ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಸದರಿಯವರಿಗೆ ಈಗಾಗಲೇ ನಮ್ಮ ಕಛೇರಿ ವತಿಯಿಂದ ಕಛೇರಿಗೆ ಹಾಜರಾಗುವಂತೆ ತಿಳಿಸಿ ಮೂರು-ನಾಲ್ಕು ಬಾರಿ ನೋಟೀಸ್‌ಗಳನ್ನು ನೀಡಿದ್ದರೂ ಸಹ ಸದರಿ ನೋಟೀಸ್‌ಗಳಿಗೆ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸದೇ ಇರುವುದರಿಂದ ಕೆಸಿಎಸ್ ಆರ್ ನಿಯಮ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಸಿಸಿಎ ಅಧಿನಿಯಮಗಳು 1983ರನ್ವಯ ಶಿಸ್ತುಕ್ರಮವಹಿಸುವಂತೆ ಕೋರಲಾಗಿರುತ್ತದೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಹಾಗೂ ಡಾ.ಬಸವರಾಜು ರವರು ಮಾತನಾಡಿ, ಸದರಿ ಉದ್ಯೋಗಿಗೆ ಎರಡು ವರ್ಷದಿಂದ ಅವರಿಗೆ ವೇತನ ಪಾವತಿಯಾಗುತ್ತಿದೆಯಾ ಎಂದು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಕರ್ತವ್ಯಕ್ಕೆ ಗೈರುಹಾಜರಾಗಿರುವ ಸದರಿ ಮಾಹೆಯಿಂದ ವೇತನ ಸ್ಥಗಿತಗೊಳಿಸಿರುವುದಾಗಿ ತಿಳಿಸಿದರು.<br><br>ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಸದರಿ ಉದ್ಯೋಗಿಯ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಿ ಎಂದು ಸಲಹೆ ನೀಡಿದರು. |
| ತೀರ್ಮಾನ | **ಶ್ರೀ ನಿಖಿಲ್‌ಗೌಡ ಜೆ., ಪರಿಚಾರಕ, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಅನಧಿಕೃತವಾಗಿ ಗೈರುಹಾಜರಾಗಿರುವ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕಾರ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಸಲ್ಲಿಸಿರುವ ಆರೋಪಣಾ ಮತ್ತು ದೋಷರೋಪಣಾ ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ<br>2024/8.10 | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ಇಲ್ಲಿಗೆ ತಾತ್ಕಾಲಿಕವಾಗಿ ವರ್ಗಾಯಿಸಲಾಗಿರುವ "ಶ್ರೀ ಮಂಟೇಸ್ವಾಮಿ, ಸಿದ್ಧಪ್ಪಾಜಿ ಮತ್ತು ರಾಚಪ್ಪಾಜಿ ಅಧ್ಯಯನ ಪೀಠ"ಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | **ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ಇಲ್ಲಿಗೆ ತಾತ್ಕಾಲಿಕವಾಗಿ ವರ್ಗಾಯಿಸಲಾಗಿರುವ "ಶ್ರೀ ಮಂಟೇಸ್ವಾಮಿ, ಸಿದ್ಧಪ್ಪಾಜಿ ಮತ್ತು ರಾಚಪ್ಪಾಜಿ ಅಧ್ಯಯನ ಪೀಠ"ಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಪ್ರೊ.ಕೆ.ಸಿ. ಶಿವಾರೆಡ್ಡಿ, ನಿವೃತ್ತ ಪ್ರಾಧ್ಯಾಪಕರು, ಭಾಷಾಂತರ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಇವರನ್ನು ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |

| | |
|---|---|
| ಸಾಮಾನ್ಯ ಸಭೆ 2024/8.11 | Retirement of Teachers of Constituent Colleges during the Calendar Year 2025. |
| | ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ನಿವೃತ್ತರಾಗುತ್ತಿರುವ ಪ್ರಾಧ್ಯಾಪಕರ ವಿರುದ್ಧ ಯಾವುದಾದರೂ ಇಲಾಖಾ ವಿಚಾರಣೆ ಅಥವಾ ಪ್ರಕರಣ ನ್ಯಾಯಾಲಯದಲ್ಲಿರುವುದೇ ಎಂದು ಕೇಳಿದರು.<br><br>ಕುಲಸಚಿವರು ಮಾತನಾಡಿ, ಡಾ.ಸೋಮಶೇಖರಪ್ಪ ಹೆಚ್, ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರು (ಪ್ರಭಾರ), ಯುವರಾಜ ಕಾಲೇಜು, ಮೈಸೂರು ಇವರು WP No.2459/2020-21 challenging the seniority of Dr.H.C.Devarajegowda ಮತ್ತು WP No.13987/2024 challenging the letter No.HRMS/459/2023-24 dated 20-3-2024 issued by Finance Officer relating to recovery of excess DA paid under 7th pay scale arrears (along with certain similarly placed teachers) ಎರಡು ಪ್ರಕರಣಗಳನ್ನು ದಾಖಲಿಸಿದ್ದಾರೆಂದು ತಿಳಿಸಿದರು. |
| ತೀರ್ಮಾನ | **The Syndicate has approved to permit the teachers to retire from the University Service who have attained the age of Superannuation.** |
| ಸಾಮಾನ್ಯ ಸಭೆ 2024/8.12 | Retirement of Post-Graduate Teachers during the Calendar Year 2025. |
| | ಕುಲಸಚಿವರು ಮಾತನಾಡಿ, ದಿನಾಂಕ 28-11-2024ರಂದು ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿನ ತೀರ್ಮಾನದಂತೆ ಪ್ರೊ.ಮಹಾದೇವಪ್ಪ, ಹಾಸನ ವಿಶ್ವವಿದ್ಯಾನಿಲಯ, ಹಾಸನ ಇವರನ್ನು ನಿವೃತ್ತ ಪ್ರಾಧ್ಯಾಪಕರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿದೆ ಎಂದು ತಿಳಿಸಿದರು. ಡಾ.ಹೆಚ್.ಮಂಜುನಾಥ, ಹಿರಿಯ ಪ್ರಾಧ್ಯಾಪಕರು, ರೇಷ್ಮೆವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಹಾಗೂ ಡಾ.ರಂಗರಾಜನ್, ಹಿರಿಯ ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದಲ್ಲಿ WP No.12363/20024 ಅನ್ನು ದಾಖಲಿಸಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು. ?<br><br>ಡಾ. ಟಿ.ಆರ್.ಚಂದ್ರಶೇಖರ್ ರವರು ಮಾತನಾಡಿ, ದಿನಾಂಕ 28-11-2024ರಂದು ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ಬಗ್ಗೆ ಮಾಹಿತಿ ಕೋರಿದರು.<br>ಮಾನ್ಯ ಕುಲಪತಿಯವರು ಮಾತನಾಡಿ, ದಿನಾಂಕ 28-11-2024ರಂದು ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಮಂಡ್ಯ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯಗಳ ಆಡಳಿತಾತ್ಮಕ ಸಮಸ್ಯೆಗಳ ಕುರಿತು ಸಭೆಯ ನಡವಳಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಇಡಿ 113 ಯುಎಂವಿ 2024, ಬೆಂಗಳೂರು, ದಿನಾಂಕ 09-12-2024ರ ಪತ್ರ ಮುಖೇನ ಈ ಕಛೇರಿಗೆ ರವಾನಿಸಿದ್ದು ಸದರಿ ನಡವಳಿಯಲ್ಲಿ ತಿಳಿಸಿರುವಂತೆ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರತ್ಯೇಕಿಸಲ್ಪಟ್ಟ ಮಂಡ್ಯ, ಹಾಸನ ಮತ್ತು ಚಾಮರಾಜನಗರ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳಲ್ಲಿ ಪದೋನ್ನತಿಗೆ ಅರ್ಹರಿರುವ ಬೋಧಕ/ಬೋಧಕೇತರರ ಮಾಹಿತಿ/ದಾಖಲೆಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು, ಮೈಸೂರು ವಿಶ್ವವಿದ್ಯಾನಿಲಯವು ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅರ್ಹ ಬೋಧಕ/ಬೋಧಕೇತರರಿಗೆ ಪದೋನ್ನತಿ ನೀಡಲು ಅಗತ್ಯ ಕ್ರಮವಹಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ.<br><br>ದಿನಾಂಕ 28-11-2024ರಂದು ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿನ ತೀರ್ಮಾನದಂತೆ ಪದೋನ್ನತಿ ಹೊಂದಲು ಅರ್ಹರಿರುವ ಬೋಧಕ/ಬೋಧಕೇತರ ಉದ್ಯೋಗಿಗಳ ಮಾಹಿತಿ/ದಾಖಲೆಗಳನ್ನು ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯೊಂದಿಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದಲ್ಲಿ ವಿಷಯ ತಜ್ಞರನ್ನೊಳಗೊಂಡ ಸಮಿತಿಯಲ್ಲಿ ಪದೋನ್ನತಿ ನೀಡಲು ಕ್ರಮವಹಿಸಲಾಗುವುದೆಂದು ತಿಳಿಸಿದರು.<br><br>ಡಾ.ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಪ್ರೊ.ಮಹಾದೇವಪ್ಪ ಇವರು ಹಾಸನ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಇದೊಂದು ವಿಶೇಷ ಪ್ರಕರಣವಾಗಿದೆ ಎಂದು ತಿಳಿಸಿದರು. |

| | |
|---|---|
| ತೀರ್ಮಾನ | **The Syndicate has approved to permit the Post-Graduate Teachers to retire from the University Service who have attained the age of Superannuation or continue the service of such teachers till the end of the academic year as per provisions under clause (3) of the Mysore University Employees (conditions of service) Statutes 1984, if they found physically fit and otherwise suitable, on re-employment basis on contractual basis, till the end of the respective semesters based on the recommendations of the Department Council.** |
| ಸಾಮಾನ್ಯ ಸಭೆ 2024/8.13 | ಡಾ. ಯಶಸ್ವಿನಿ ಎಸ್., ಸಹಾಯಕ ಪ್ರಾಧ್ಯಾಪಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಕಾಂಬೋಡಿಯ ಮತ್ತು ವಿಯೇಟ್ನಾಂ ದೇಶಗಳಿಗೆ ಭೇಟಿ ನೀಡಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | **ಡಾ. ಯಶಸ್ವಿನಿ ಎಸ್., ಸಹಾಯಕ ಪ್ರಾಧ್ಯಾಪಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 14-10-2024ರಿಂದ 24-10-2024ರವರೆಗೆ ಇವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು "ಪ್ರಾಚೀನ ವಾಸ್ತುಶಿಲ್ಪ" ಕುರಿತು ಅಧ್ಯಯನ ಪ್ರವಾಸಕ್ಕಾಗಿ ಕಾಂಬೋಡಿಯ ಮತ್ತು ವಿಯೇಟ್ನಾಂ ದೇಶಗಳಿಗೆ ವಿಶ್ವವಿದ್ಯಾನಿಲಯದ ಷರತ್ತುಗಳನ್ವಯ ಭೇಟಿ ನೀಡಿರುವುದಕ್ಕೆ ಘಟನೋತ್ತರ ಅನುಮತಿ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/8.14 | ದಿನಾಂಕ: 26-07-2024ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಾಚ್ಯವಿದ್ಯಾ ಸಂಶೋಧನಾಲಯದ ಉನ್ನತ ಮಟ್ಟದ ಸಮಿತಿಯ ಎರಡನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ದಿನಾಂಕ: 26-07-2024ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಾಚ್ಯವಿದ್ಯಾ ಸಂಶೋಧನಾಲಯದ ಉನ್ನತ ಮಟ್ಟದ ಸಮಿತಿಯ ಎರಡನೇ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಸಭೆಯಲ್ಲಿ ಮಂಡಿಸಿದರು.<br><br>ಮುಂದುವರೆದು, ಡಾ.ಸುಧಾಮೂರ್ತಿ, ಅಧ್ಯಕ್ಷರು, ಇನ್‌ಫೋಸಿಸ್ ಪ್ರತಿಷ್ಠಾನ, ಶೃಂಗೇರಿ ಶಾರದಾ ಪೀಠದವರು ಆರ್ಥಿಕ ಸಹಕಾರ ನೀಡಲು ಹಾಗೂ ಇತರೆ ಸಂಸ್ಥೆಗಳು ಸಹ ಮುಂದೆ ಬಂದಿರುತ್ತಾರೆ.<br><br>ಶ್ರೀ ಮಹಾದೇಶುರವರು ಮಾತನಾಡಿ, ಖಾಸಗಿ ಮುದ್ರಣಾಲಯಕ್ಕಿಂತ ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ ತಗಲುವ ವೆಚ್ಚ ಹೆಚ್ಚುವರಿಯಾಗುತ್ತದೆಯೇ ಎಂದು ಕೇಳಿದರು.<br><br>ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ ಆಧುನಿಕ ತಂತ್ರಜ್ಞಾನವನ್ನೊಳಗೊಂಡ ಮುದ್ರಣ ಯಂತ್ರಗಳು ಲಭ್ಯವಿಲ್ಲವೆಂದೂ ಹಾಗೂ ವಿಶ್ವವಿದ್ಯಾನಿಲಯದ ಕಛೇರಿ ನಿರ್ವಹಣೆಗೆ ಅಗತ್ಯವಿರುವ ಕಡತಗಳು, ಪತ್ರಗಳು, ಟಿಪ್ಪಣಿ ಹಾಳೆ, ಲೆಟರ್‌ಹೆಡ್‌ಗಳು, ಪಠ್ಯಪುಸ್ತಕಗಳ ಮುದ್ರಣ ಹಾಗೂ ಇತರೆ ಲೇಖನ ಸಾಮಾಗ್ರಿಗಳನ್ನು ಮಾತ್ರ ಮುದ್ರಣಾಲಯದಲ್ಲಿ ಮುದ್ರಿಸುವ ಕಾರ್ಯವನ್ನು ನಿರ್ವಹಿಸುತ್ತಾರೆಂದು ತಿಳಿಸಿದರು. |
| ತೀರ್ಮಾನ | **ದಿನಾಂಕ: 26-07-2024ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಾಚ್ಯವಿದ್ಯಾ ಸಂಶೋಧನಾಲಯದ ಉನ್ನತ ಮಟ್ಟದ ಸಮಿತಿಯ ಎರಡನೇ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/8.15 | ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| | ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಪ್ರೊ. ಟಿ.ಆರ್.ಮಾರುತಿ, ಸಂಶೋಧನಾ ಮಾರ್ಗದರ್ಶಕರು, ಕಾನೂನು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಾರ್ಗದರ್ಶನದಲ್ಲಿ ಸಂಶೋಧನಾ ಕಾರ್ಯ ನಿರ್ವಹಿಸುತ್ತಿರುವ Mr.Farzaneh Sheikhnia ರವರ ಸಂಶೋಧನಾ ಅವಧಿಯು ದಿನಾಂಕ |

| | |
|---|---|
| | 05-04-2023ರಂದು ಏಳು ವರ್ಷಗಳು ಪೂರ್ಣಗೊಂಡಿದ್ದು, ಕೋವಿಡ್-19 ಹಾಗೂ ವೈಯಕ್ತಿಕ ಕಾರಣಗಳಿಂದ ಸಂಶೋಧನೆಯನ್ನು ಪೂರ್ಣಗೊಳಿಸಿ ಮಹಾಪ್ರಬಂಧವನ್ನು ಸಲ್ಲಿಸಲು ಸಾಧ್ಯವಾಗದ ಕಾರಣ 1 ವರ್ಷ 8 ತಿಂಗಳ ನಂತರ ದಿನಾಂಕ 05-10-2024ರಂದು ತಡವಾಗಿ ಮಾನ್ಯ ಕುಲಪತಿಯವರಲ್ಲಿ ಮನವಿ ಸಲ್ಲಿಸಿ, 06 ತಿಂಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಬೇಕೆಂದು ಕೋರಿರುವುದನ್ನು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **Mr.Farzaneh Sheikhnia, ಸಂಶೋಧನಾ ವಿದ್ಯಾರ್ಥಿ, ಕಾನೂನು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಸಂಶೋಧನಾ ಮಹಾ ಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ರೂಪಾಯಿ ಎರಡು ಲಕ್ಷ ದಂಡ ಶುಲ್ಕ ವಿಧಿಸುವುದರೊಂದಿಗೆ ಮೂರು ತಿಂಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/8.16 | ಡಾ. ಎಂ. ವಾಸಂತಿ, ಸಹಾಯಕ ಪ್ರಾಧ್ಯಾಪಕರು, ಹಿಂದಿ ಅಧ್ಯಯನ ವಿಭಾಗ, ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಪೋಲೀಸ್ ನಿರೀಕ್ಷಕರು, ಜಯಲಕ್ಷ್ಮಿಪುರಂ ಪೋಲೀಸ್ ಠಾಣೆ, ಮೈಸೂರು ಇವರು ತಮ್ಮ ಪತ್ರ ಸಂಖ್ಯೆ: ಜೆಎಲ್‌ಪಿಎಸ್/ಸಿಸಿ/476/2024, ದಿನಾಂಕ : 16.11.2024 ಮತ್ತು 2.12.2024ರ ಪತ್ರದಲ್ಲಿ ತಿಳಿಸಿರುವಂತೆ ಡಾ. ಎಂ. ವಾಸಂತಿ, ಸಹಾಯಕ ಪ್ರಾಧ್ಯಾಪಕರು, ಹಿಂದಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಮೈಸೂರು ಘನ-1ನೇ ಅಡಿಷನಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಸಿಸಿ ಸಂಖ್ಯೆ: 36960/2022 ದಿನಾಂಕ 11-07-2024ರ ಘನ ನ್ಯಾಯಾಲಯದ ಆದೇಶನುಸಾರ ಕನ್ವಿಕ್ಷನ್ ವಾರೆಂಟ್ ಆರೋಪಿಯಾಗಿದ್ದು, ದಿನಾಂಕ 15-11-2024ರಂದು ಸದರಿಯವರನ್ನು ದಸ್ತಗಿರಿ ಮಾಡಲಾಗಿದೆ, ಸದರಿಯವರಿಗೆ ಬಿ.ಪಿ ಹೆಚ್ಚಾದ ಕಾರಣ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ನೀಡಿ ದಿನಾಂಕ 16-11-2024ರಂದು ಕೇಂದ್ರ ಕಾರಾಗೃಹಕ್ಕೆ ಬಿಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.<br><br>ಮುಂದುವರೆದು, ಡಾ. ವಾಸಂತಿಯವರಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡಿ ಎಂದು ಪೋಲೀಸ್ ನಿರೀಕ್ಷಕರಿಗೆ ಪತ್ರ ಬರೆದಿರುವುದಾಗಿ ತಿಳಿಸಿದರು. ಪೋಲೀಸ್ ನಿರೀಕ್ಷಕರು ದಿನಾಂಕ 02-12-2024ರ ಪತ್ರದಲ್ಲಿ ಡಾ.ವಾಸಂತಿ ಎಂ ರವರನ್ನು ದಿನಾಂಕ 16-11-2024ರಂದು ಕಾರಾಗೃಹಕ್ಕೆ ದಾಖಲು ಮಾಡಿದ್ದು, ದಿನಾಂಕ 16-11-2024ರಿಂದ ದಿನಾಂಕ 27-11-2024ರವರೆಗೆ ಒಟ್ಟು 12 ದಿನಗಳ ಕಾಲ ಮೈಸೂರು ಕಾರಾಗೃಹದಲ್ಲಿ ಇದ್ದರೆಂದು ಮಾಹಿತಿಯನ್ನು ಒದಗಿಸಿದ್ದಾರೆಂದು ತಿಳಿಸಿದರು. ಸದರಿ ವಿಷಯವು ತಡವಾಗಿ ತಿಳಿದುಬಂದಿದೆಯೆಂ ದು ತಿಳಿಸಿದರು. ಸದರಿ ಅಧ್ಯಾಪಕರನ್ನು ಅಧ್ಯಕ್ಷ ಸ್ಥಾನದಿಂದ ಬಿಡುಗಡೆಗೊಳಿಸಿ, ಹಿಂದಿ, ಉರ್ದು ಅಧ್ಯಯನ ವಿಭಾಗಗಳಿಗೆ ಪ್ರೊ.ಮಹೇಶ್, ಎಂ, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಹಾಗೂ ಪ್ರೊ.ಚಂದ್ರಮೌಳಿ, ಸಮಾಜಕಾರ್ಯ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು ಇವರನ್ನು ಸಂಸ್ಕೃತ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ನೇಮಿಸಲಾಗಿರುತ್ತದೆ ಎಂದು ತಿಳಿಸಿದರು.<br><br>ಡಾ. ಎಂ.ವಾಸಂತಿ, ಸಹಾಯಕ ಪ್ರಾಧ್ಯಾಪಕರು, ಹಿಂದಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 16-11-2024 ರಿಂದ 27-11-2024ರವರೆಗೆ ಒಟ್ಟು 12 ದಿನಗಳ ಕಾಲ ಮೈಸೂರು ಕಾರಾಗೃಹದಲ್ಲಿ ದಸ್ತಗಿರಿಯಲ್ಲಿದ್ದ ನಿಮಿತ್ತ ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕರಣ 7 (4) (ಎ) ರ ಅನ್ವಯ ದಿನಾಂಕ 16-11-2024 ರಿಂದ ಪೂರ್ವಾನ್ವಯವಾಗುವಂತೆ ವಿಶ್ವವಿದ್ಯಾನಿಲಯ ಸೇವೆಯಿಂದ ಅಮಾನತ್ತುಗೊಳಿಸಲು ಆದೇಶಿಸಲಾಗಿರುತ್ತದೆ ಹಾಗೂ ಸದರಿಯವರಿಗೆ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಮಂಜೂರು ಮಾಡಲು ಕ್ರಮಕೈಗೊಳ್ಳಲಾಗಿದೆಯೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಡಾ.ಎಂ.ವಾಸಂತಿಯವರ ವಿರುದ್ಧ ಮುಂದಿನ ಕ್ರಮವೇನು ಎಂದು ಕೇಳಿದರು.<br><br>ಕುಲಸಚಿವರು ಮಾತನಾಡಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಂದ ಇಲಾಖಾ ವಿಚಾರಣೆಯನ್ನು ನಡೆಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.<br><br>ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಫಾರವರು ಮಾತನಾಡಿ, ಡಾ.ವಾಸಂತಿಯವರು ನಾಲ್ಕು ವರ್ಷದಿಂದ ಬೋಧನಾ ಕಾರ್ಯವನ್ನು ನಿರ್ವಹಿಸಿರುವುದಿಲ್ಲ. ಅಂತಹವರನ್ನು ನಾಲ್ಕು ಅಧ್ಯಯನ ವಿಭಾಗಗಳಿಗೆ |

| | |
|---|---|
| | ಅಧ್ಯಕ್ಷರನ್ನಾಗಿ ಹಾಗೂ ನಾಲ್ಕು ವಿದ್ಯಾರ್ಥಿನಿಲಯಕ್ಕೆ ಶಿಕ್ಷಕ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆಯೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ಅಧ್ಯಾಪಕರನ್ನು ಹಿಂದಿ, ಉರ್ದು ಹಾಗೂ ಸಂಸ್ಕೃತ ಅಧ್ಯಯನ ವಿಭಾಗಗಳ ಅಧ್ಯಕ್ಷ ಸ್ಥಾನದಿಂದ ಹಾಗೂ ಶಿಕ್ಷಕ ಸಲಹೆಗಾರರ ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕರ್ತವ್ಯ ಲೋಪವೆಸಗುವವರ ವಿರುದ್ಧ ನೋಟೀಸ್ ಜಾರಿ ಮಾಡಬೇಕೆಂದು ಇಂದಿನ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು, ಡಾ.ವಾಸಂತಿಯವರನ್ನು ಆರು ತಿಂಗಳ ಅವಧಿಯವರೆಗೆ ಕರ್ತವ್ಯದಿಂದ ಅಮಾನತ್ತುಗೊಳಿಸಿ ಶೇಕಡ 50 ರಷ್ಟು ವೇತನ ಪಾವತಿಸಬೇಕಾಗುತ್ತದೆಯೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಉರ್ದು, ಹಿಂದಿ ಹಾಗೂ ಸಂಸ್ಕೃತ ಅಧ್ಯಯನ ವಿಭಾಗಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ. ಸದರಿಯವರು ಬೋಧನಾ ಕಾರ್ಯವನ್ನೂ ಸಮರ್ಥವಾಗಿ ನಿರ್ವಹಿಸುತ್ತಿಲ್ಲ ಮತ್ತು ವಿವಿಧ ಕಾರಣಗಳ ಹಿನ್ನೆಲೆಯಲ್ಲಿ ಅವರನ್ನು ಅಧ್ಯಕ್ಷರು/ ಶಿಕ್ಷಕ ಸಲಹೆಗಾರರ ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು ಕೆಸಿಎಸ್‌ಆರ್ ನಿಯಮಾನುಸಾರ ಶೀಘ್ರವಾಗಿ ಇಲಾಖಾ ವಿಚಾರಣೆಯನ್ನು ನಡೆಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. |
| ತೀರ್ಮಾನ | **ಡಾ. ಎಂ. ವಾಸಂತಿ, ಸಹಾಯಕ ಪ್ರಾಧ್ಯಾಪಕರು, ಹಿಂದಿ ಅಧ್ಯಯನ ವಿಭಾಗ, ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/8.17 | 2024-25ನೇ ಶೈಕ್ಷಣಿಕ ಸಾಲಿಗೆ ಸಂದರ್ಶಕ ಪ್ರಾಧ್ಯಾಪಕರುಗಳನ್ನು ಆಹ್ವಾನಿಸಿರುವ ಬಗೆಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 53(10)ರಲ್ಲಿನ ನಿಯಮದನ್ವಯ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈ ಕೆಳಕಂಡ ಸಂದರ್ಶಕ ಪ್ರಾಧ್ಯಾಪಕರುಗಳನ್ನು 2024-25ನೇ ಶೈಕ್ಷಣಿಕ ಸಾಲಿಗೆ ಮಾಹೆಯಾನ ರೂ.10,000/-ಗಳ ಗೌರವಧನದೊಂದಿಗೆ ನೇಮಕ ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>(1) ಡಾ.ಬಿ.ಹೆಚ್.ಸುರೇಶ್, ವಾಣಿಜ್ಯ ಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು<br><br>(2) ಡಾ.ಜಿ.ಸುಬ್ರಹ್ಮಣ್ಯ, ಜೆನಿಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು<br><br>(3) ಡಾ.ಎಸ್. ಮಸೂದ್ ಸಿರಾಜ್, ಉರ್ದು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು. |
| ತೀರ್ಮಾನ | **2024-25ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 53(10)ರಲ್ಲಿನ ನಿಯಮದನ್ವಯ ಮಾಹೆಯಾನ ರೂ.10,000/-ಗಳ ಗೌರವಧನದೊಂದಿಗೆ ಈ ಕೆಳಕಂಡ ನಿವೃತ್ತ ಪ್ರಾಧ್ಯಾಪಕರುಗಳನ್ನು ಇದೊಂದು ಬಾರಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.**<br><br>**(1) ಡಾ.ಬಿ.ಹೆಚ್.ಸುರೇಶ್, ವಾಣಿಜ್ಯ ಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು**<br><br>**(2) ಡಾ.ಜಿ.ಸುಬ್ರಹ್ಮಣ್ಯ, ಜೆನಿಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು**<br><br>**(3) ಡಾ.ಎಸ್. ಮಸೂದ್ ಸಿರಾಜ್, ಉರ್ದು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.** |
| ಸಾಮಾನ್ಯ ಸಭೆ 2024/8.18 | ಅಧ್ಯಾಪಕೇತರ ವೃಂದದ ಅಧಿಕಾರಿ/ ಉದ್ಯೋಗಿಗಳು ವಿದೇಶಕ್ಕೆ ತೆರಳಲು/ಹೋಗಿ ಬಂದಿರುವುದಕ್ಕೆ ಅನುಮತಿ ನೀಡಿರುವ ಬಗ್ಗೆ. |
| ತೀರ್ಮಾನ | **ವಿಶ್ವವಿದ್ಯಾನಿಲಯದ ಕೆಳಕಂಡ ಅಧ್ಯಾಪಕೇತರ ವೃಂದದ ಅಧಿಕಾರಿ/ ಉದ್ಯೋಗಿಗಳು ವಿದೇಶಕ್ಕೆ ತೆರಳಲು/ಹೋಗಿ ಬಂದಿರುವುದಕ್ಕೆ ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

| ಕ್ರ. ಸಂ. | ಉದ್ಯೋಗಿಗಳ ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ | ಕಾರ್ಯನಿರ್ವಹಿಸುತ್ತಿರುವ ಕಛೇರಿ/ವಿಭಾಗ | ವಿದೇಶದ ಹೆಸರು | ರಜೆ ಅವಧಿ |
|---|---|---|---|---|
| 01 | ಸಿ.ಪುರುಷೋತ್ತಮ ಅಧೀಕ್ಷಕರು | ಆಡಳಿತ ಶಾಖೆ ಮೈವಿವಿ, ಮೈಸೂರು | ಸಿಂಗಾಪುರ್ ಮತ್ತು ಪುಕೇಟ್ | 23.10.2024 ರಿಂದ 30.10.2014 |
| 02 | ಚಿರಾಗ್ ಹೆಚ್ ಆರ್ ದ್ವಿತೀಯ ದರ್ಜೆ ಸಹಾಯಕ | ಆಡಳಿತ ಶಾಖೆ ಮೈವಿವಿ, ಮೈಸೂರು | ಮಲೇಷಿಯಾ ಮತ್ತು ಸಿಂಗಾಪುರ್ | 26.10.2024 ರಿಂದ 03.11.2024 |
| 03 | ಹರ್ಷ ವೈ ಎಸ್ ಸಹಾಯಕ ಹಣಕಾಸು ಅಧಿಕಾರಿ | ಹಣಕಾಸು ಶಾಖೆ ಮೈವಿವಿ, ಮೈಸೂರು | ಮಲೇಷಿಯಾ, ಥೈಲ್ಯಾಂಡ್ ಮತ್ತು ಬ್ಯಾಂಕಾಕ್ | 09.12.2024 ರಿಂದ 17.12.2024 |
| 04 | ಕೆ.ಟಿ.ಮನು ಅಧೀಕ್ಷಕರು | ಪರೀಕ್ಷಾ ಶಾಖೆ ಮೈವಿವಿ, ಮೈಸೂರು | | |
| 05 | ಚಂದ್ರು ಎಂ ಸಿ ಅಧೀಕ್ಷಕರು | ಹಣಕಾಸು ಶಾಖೆ ಮೈವಿವಿ, ಮೈಸೂರು | | |
| 06 | ರವಿ ಆರ್ ಅಧೀಕ್ಷಕರು | ವಿವಿ ಸಂಜೆ ಕಾಲೇಜು ಮೈವಿವಿ, ಮೈಸೂರು | | |
| 07 | ಶಿವಣ್ಣ ಡಿ ಹಿರಿಯ ಸಹಾಯಕರು | ಹಣಕಾಸು ಶಾಖೆ ಮೈವಿವಿ, ಮೈಸೂರು | | |
| 08 | ಸತೀಶ್ ಎಂ ಹಿರಿಯ ಸಹಾಯಕರು | ಆಡಳಿತ ಶಾಖೆ ಮೈವಿವಿ, ಮೈಸೂರು | | |
| 09 | ಚಂದ್ರಹಾಸ ಡಿ ಪ್ರಥಮ ದರ್ಜೆ ಸಹಾಯಕ | ಆಡಳಿತ ಶಾಖೆ ಮೈವಿವಿ, ಮೈಸೂರು | | |
| 10 | ಕೃಷ್ಣ ಪಿ ಎಸ್ ಪ್ರಥಮ ದರ್ಜೆ ಸಹಾಯಕ | ಆಡಳಿತ ಶಾಖೆ ಮೈವಿವಿ, ಮೈಸೂರು | | |
| 11 | ರಾಜುಪಟೇಲ್ ಆರ್ ಪ್ರಥಮ ದರ್ಜೆ ಸಹಾಯಕ | ಪರೀಕ್ಷಾ ಶಾಖೆ ಮೈವಿವಿ, ಮೈಸೂರು | | |
| 12 | ಪ್ರವೀಣ್‌ಕುಮಾರ್ ದ್ವಿತೀಯ ದರ್ಜೆ ಸಹಾಯಕ | ಆಡಳಿತ ಶಾಖೆ ಮೈವಿವಿ, ಮೈಸೂರು | | |
| 13 | ಜೆ.ವೆಂಕಟೇಶ್ ಪರಿಚಾರಕ | ಆಡಳಿತಾಧಿಕಾರಿಗಳ ಕಛೇರಿ ಮಾಗಂ, ಮೈಸೂರು | | |
| 14 | ಕೆ.ಎನ್.ಕುಮುದ ಹಿರಿಯ ಸಹಾಯಕಿ | ಆಡಳಿತ ಶಾಖೆ ಮೈವಿವಿ, ಮೈಸೂರು | ಆಸ್ಟ್ರೇಲಿಯಾ | 16.12.2024 ರಿಂದ 10.01.2025 |

| | |
|---|---|
| ಸಾಮಾನ್ಯ ಸಭೆ 2024/8.19 | ಶ್ರೀಮತಿ ಜಯಲಕ್ಷ್ಮಿ, ತಾತ್ಕಾಲಿಕ ಸಫಾಯಿ ಕರ್ಮಚಾರಿ ಸಿಬ್ಬಂದಿ, ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್-3 ಇವರಿಗೆ ಸಫಾಯಿ ಕರ್ಮಚಾರಿ ವೇತನ ನೀಡುವ ಸಂಬಂಧ ಆದೇಶಿಸಿರುವುದನ್ನು ಅನುಸಮರ್ಥಿಸುವ ಬಗ್ಗೆ. |
| ತೀರ್ಮಾನ | **ಶ್ರೀಮತಿ ಜಯಲಕ್ಷ್ಮಿ, ತಾತ್ಕಾಲಿಕ ಸಫಾಯಿ ಕರ್ಮಚಾರಿ ಸಿಬ್ಬಂದಿ, ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್-3 ಇವರಿಗೆ ಸಫಾಯಿ ಕರ್ಮಚಾರಿ ವೇತನ ನೀಡಿರುವ ಸಂಬಂಧ ಆದೇಶಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/8.20 | ಡಾ. ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರ ವಿರುದ್ಧ ಇಲಾಖೆ ವಿಚಾರಣಾ ನಡೆಸಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | **ಡಾ. ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರ ವಿರುದ್ಧ ಇಲಾಖೆ ವಿಚಾರಣಾ ನಡೆಸಲು ಮಂಡನಾಧಿಕಾರಿಯನ್ನು ನೇಮಕ ಮಾಡುವುದರೊಂದಿಗೆ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |

| | |
|---|---|
| ಸಾಮಾನ್ಯ ಸಭೆ 2024/8.21 | ಡಾ. ಎಂ. ಮಂಜುನಾಥ್, ಪಿಟೀಲು ವಿಭಾಗ, ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬಂದಿರುವ ಸಂಬಂಧ ಸಿಂಡಿಕೇಟ್ ಸಭೆಯ ಅನುಮೋದನೆಯ ಬಗೆಗೆ. |
| ತೀರ್ಮಾನ | **ಡಾ. ಎಂ. ಮಂಜುನಾಥ್, ಪಿಟೀಲು ವಿಭಾಗ, ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಅವರ ಹಕ್ಕಿನಲ್ಲಿರುವ ವಿಶೇಷ ಸಾಂದರ್ಭಿಕ ರಜೆಯನ್ನು ಉಪಯೋಗಿಸಿಕೊಂಡು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬಂದಿರುವ ಸಂಬಂಧ ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/8.22 | 2006-07ನೇ ಸಾಲಿನಲ್ಲಿ ನಡೆದ ಬೋಧಕರ ನೇಮಕಾತಿಗೆ ಸಂಬಂಧಿಸಿದಂತೆ ಘನ ಸರ್ಕಾರವು ನಿರ್ದೇಶಿಸಿರುವಂತೆ ಕ್ರಮವಹಿಸಲು ರಚಿಸಲಾಗಿದ್ದ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | **2006 ಮತ್ತು 2007ನೇ ಸಾಲಿನಲ್ಲಿ ನಡೆದ ಬೋಧಕರ ನೇಮಕಾತಿಗೆ ಸಂಬಂಧಿಸಿದಂತೆ ಡಾ.ಎನ್.ಎಸ್.ರಾಮೇಗೌಡ ರವರ ಅಧ್ಯಕ್ಷತೆಯಲ್ಲಿ ಸರ್ಕಾರವು ರಚಿಸಿದ ಸಮಿತಿಯ ವರದಿಯನ್ನು ಗಮನಿಸಿ ಹಾಗೂ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು ಇವರ ಪತ್ರ ಸಂಖ್ಯೆ GS 52 UNISEC 2024 ದಿನಾಂಕ 15-07-2024ರಲ್ಲಿ ತಿಳಿಸಿರುವ 'In view of no financial loss to the University and further the procedural lapses during the recruitments in 2007 have already been set right subsequently, the matter is reseted and no further action is required" ಅಂಶವನ್ನು ಗಮನಿಸಿದ ಸಿಂಡಿಕೇಟ್ ಸಭೆಯು ಪ್ರೊ.ಆನಂದ್ ಡಿ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸಿನನ್ವಯ ಕ್ರಮವಹಿಸಲು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/8.23 | ವಿಶ್ವವಿದ್ಯಾನಿಲಯ ಕಾನೂನು ಶಾಲೆಯಲ್ಲಿ ನಡೆಸುತ್ತಿರುವ ಪ್ರೋಗ್ರಾಂಗಳನ್ನು ಕಾನೂನು ವಿಶ್ವವಿದ್ಯಾನಿಲಯದ ವ್ಯಾಪ್ತಿಯಡಿ ತರುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ದಿನಾಂಕ 7-12-2024ರ ಪತ್ರದಲ್ಲಿ ಕಾನೂನು ವಿಷಯದ ಕಾಲೇಜುಗಳು/ಅನುದಾನಿತ ಕಾಲೇಜು/ಕಾನೂನು ವಿಭಾಗಗಳು ಮತ್ತು ಘಟಕ ಕಾಲೇಜುಗಳು ಹಾಗೂ ಜಮೀನು ಮತ್ತಿತರ ಚರ ಹಾಗೂ ಸ್ಥಿರಾಸ್ಥಿಗಳನ್ನು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿಯೊಂದಿಗೆ ವಿಲೀನಗೊಳಿಸಲು ಕೂಡಲೇ ನಿಯಮಾನುಸಾರ ಅಗತ್ಯ ಕ್ರಮ ವಹಿಸುವಂತೆ ಹಾಗೂ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಅಭಿಪ್ರಾಯ/ನಿರ್ಣಯವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿದ ಹಿನ್ನೆಲೆಯಲ್ಲಿ ದಿನಾಂಕ 16-12-2024ರಂದು ವಿಶ್ವವಿದ್ಯಾನಿಲಯದ ಕಾನೂನು ನಿಕಾಯದ ಡೀನರಿಗೆ ಪತ್ರ ಬರೆಯಲಾಗಿದ್ದು, ದಿನಾಂಕ 17-12-2024ರಂದು ಕಾನೂನು ನಿಕಾಯದ ಡೀನರು ಪರಿಷತ್ತಿನ ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸಿ "ಕಾನೂನು ಅಧ್ಯಯನ ವಿಭಾಗ ಮತ್ತು ಕಾನೂನು ಶಾಲೆಯನ್ನು ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿಯೊಂದಿಗೆ ವಿಲೀನಗೊಳಿಸಬಾರದೆಂದು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಅಂಗವಾಗಿಯೇ ಮುಂದುವರೆಸಿಕೊಂಡು ಹೋಗಬೇಕೆಂದು ತೀರ್ಮಾನಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.<br><br>ಡಾ.ಬಸವರಾಜುರವರು ಮಾತನಾಡಿ, ಚರ ಮತ್ತು ಸ್ಥಿರಾಸ್ತಿಗಳನ್ನು ಕಾನೂನು ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸಬೇಕೆ ಎಂದು ಕೇಳಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಚರ ಮತ್ತು ಸ್ಥಿರಾಸ್ತಿಗಳನ್ನು ಕಾನೂನು ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸಲು ಸಾಧ್ಯವಿಲ್ಲವೆಂದು ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ಕಳೆದ 50 ವರ್ಷಗಳಿಂದಲೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾನೂನು ಅಧ್ಯಯನ ವಿಭಾಗವನ್ನು ಪ್ರಾರಂಭ ಮಾಡಿ, ಸದರಿ ಅಧ್ಯಯನ ವಿಭಾಗದಲ್ಲಿ ಬಿ.ಎ.ಎಲ್.ಎಲ್.ಬಿ, ಬಿ.ಕಾಂ.ಎಲ್.ಎಲ್.ಬಿ ಮತ್ತು ಎಲ್.ಎಲ್.ಎಂ. ಪ್ರೊಗ್ರಾಂಗಳನ್ನು ಮುನ್ನಡೆಸಿಕೊಂಡು ಬಂದಿದ್ದು ಸದರಿ ಪ್ರೊಗ್ರಾಂಗಳಲ್ಲಿ ವ್ಯಾಸಂಗ ಮಾಡಿರುವ ಹಲವಾರು ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ತಮ್ಮ ವೃತ್ತಿಯನ್ನು ನಡೆಸುತ್ತಿರುತ್ತಾರೆ. ಪ್ರಸ್ತುತ ಕಳೆದ 8 ವರ್ಷಗಳಿಂದ ಕಾನೂನು ನಿಕಾಯದಡಿಯಲ್ಲಿ ಕಾನೂನು ಶಾಲೆಯನ್ನು ಸಹ ಪ್ರಾರಂಭಿಸಿ ಹಲವಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆಂದು ತಿಳಿಸಿದರು. ಸದರಿ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿರುವುದೇ ಒಂದು ಹೆಮ್ಮೆಯ |

| | |
|---|---|
| | ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಇರುವ ಬಿ.ಎ.ಎಲ್.ಎಲ್.ಬಿ, ಬಿ.ಕಾಂ.ಎಲ್.ಎಲ್.ಬಿ ಮತ್ತು ಎಲ್.ಎಲ್.ಎಂ. ಪ್ರೊಗ್ರಾಂಗಳನ್ನು ಕಾನೂನು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಬಾರದೆಂದು ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ಗೋಕುಲ್ ಗೋವರ್ಧನ್ ಡಾ.ಟಿ.ಆರ್.ಚಂದ್ರಶೇಖರ್ ಮತ್ತು ಡಾ.ಬಸವರಾಜು ಸಿ ರವರು ಸಹ ಸದರಿಯವರ ನಿಲುವನ್ನು ಬೆಂಬಲಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಮೇಲಿನ ಪ್ರಸ್ತಾಪಕ್ಕೆ ಎಲ್ಲಾ ಸಿಂಡಿಕೇಟ್ ಸದಸ್ಯರು ಅಭಿಪ್ರಾಯವನ್ನು ತಿಳಿಸುವಂತೆ ಮತ್ತೊಮ್ಮೆ ಕೋರಿದರು.<br><br>"ಕಾನೂನು ಅಧ್ಯಯನ ವಿಭಾಗ ಮತ್ತು ಕಾನೂನು ಶಾಲೆಯನ್ನು ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿಯೊಂದಿಗೆ ವಿಲೀನಗೊಳಿಸಬಾರದೆಂದು ಸಿಂಡಿಕೇಟ್ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು. |
| ತೀರ್ಮಾನ | **"ಕಾನೂನು ಅಧ್ಯಯನ ವಿಭಾಗ ಮತ್ತು ಕಾನೂನು ಶಾಲೆಯನ್ನು ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿಯೊಂದಿಗೆ ವಿಲೀನಗೊಳಿಸಬಾರದೆಂದು ಹಾಗೂ ಅಧಿನಿಯಮಗಳಿಗನುಸಾರ ಚಾಲ್ತಿಯಲ್ಲಿರುವ ಇಲ್ಲಿನ ಕೋರ್ಸ್‌ಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಅಂಗವಾಗಿಯೇ ಮುಂದುವರಿಸಿಕೊಂಡು ಹೋಗಬೇಕೆಂದು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/8.24 | Combined Board of Studies (CB)ಯನ್ನು ರದ್ದುಪಡಿಸಿ, ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳಿಗೆ ಪ್ರತ್ಯೇಕ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | **ಪ್ರಸ್ತುತ ರಾಜ್ಯ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿಯ ಬದಲಾಗಿ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿರುವ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ರಚಿಸಲಾಗಿರುವ ಸ್ನಾತಕ ಮತ್ತು ಸ್ನಾತಕೋತ್ತರ ಸಂಯುಕ್ತ ಅಧ್ಯಯನ ಮಂಡಳಿಗಳನ್ನು ರದ್ದುಪಡಿಸಿ, ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳಿಗೆ ಪ್ರತ್ಯೇಕ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸುವ ವಿವೇಚಾನಾಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/8.25 | ದೂರ ಶಿಕ್ಷಣ ನಿರ್ದೇಶನಾಲಯ ಕಾರ್ಯಕ್ರಮದಡಿಯಲ್ಲಿ ಜರುಗುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪಠ್ಯ ರಚಿಸಿರುವ ಅಧ್ಯಾಪಕರುಗಳಿಗೆ ಗೌರವಧನ ನೀಡಲು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಸ್ನಾತಕ ಪದವಿಯ ಕೋರ್ಸುಗಳಿಗೆ I, II, III, IV, V, VIನೇ ಚಾತುರ್ಮಾಸದ 89 ಘಟಕಗಳು ಮತ್ತು ಸ್ನಾತಕೋತ್ತರ ಪದವಿಯ III ಮತ್ತು IV ಚಾತುರ್ಮಾಸದ 45 ಘಟಕಗಳ ಪಠ್ಯಗಳನ್ನು ರಚಿಸಲು 34 ಅಧ್ಯಾಪಕರುಗಳನ್ನು ನಿಯೋಜಿಸಿ ಸದರಿ ಕಾರ್ಯವನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಪ್ರಸ್ತುತ ರಾಜ್ಯ ಸರ್ಕಾರದ ಆದೇಶದನ್ವಯ 2020ರಲ್ಲಿಯೇ ದೂರಶಿಕ್ಷಣ ನಿರ್ದೇಶನಾಲಯದಲ್ಲಿನ ಕೋರ್ಸುಗಳನ್ನು ಸ್ಥಗಿತಗೊಳಿಸಲಾಗಿರುವ ಹಿನ್ನೆಲೆಯಲ್ಲಿ ಸದರಿ ಕೋರ್ಸುಗಳಿಗೆ ಪಠ್ಯಗಳನ್ನು ರಚಿಸಲಾಗಿದಂತಹ ಅಧ್ಯಾಪಕರುಗಳಿಗೆ ಗೌರವಧನವನ್ನು ನೀಡಿರುವುದಿಲ್ಲವೆಂಬ ಅಂಶವನ್ನು ಗಮನಕ್ಕೆ ತರುತ್ತಾ, ಸದರಿ ಅಧ್ಯಾಪಕರುಗಳಿಗೆ ಶೇಕಡ 50ರಷ್ಟು ಗೌರವಧನವನ್ನು ಪಾವತಿಸಲು ದಿನಾಂಕ 05-12-2024ರಂದು ಜರುಗಿದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು. |
| ತೀರ್ಮಾನ | **ದೂರ ಶಿಕ್ಷಣ ನಿರ್ದೇಶನಾಲಯ ಕಾರ್ಯಕ್ರಮದಡಿಯಲ್ಲಿ ಜರುಗುವ ಸ್ನಾತಕ ಪದವಿಯ ಕೋರ್ಸುಗಳಿಗೆ I, II, III, IV, V, VIನೇ ಚಾತುರ್ಮಾಸದ 89 ಘಟಕಗಳು ಮತ್ತು ಸ್ನಾತಕೋತ್ತರ ಪದವಿಯ III ಮತ್ತು IV ಚಾತುರ್ಮಾಸದ 45 ಘಟಕಗಳ ಪಠ್ಯಗಳನ್ನು ರಚಿಸಿರುವ 34 ಅಧ್ಯಾಪಕರುಗಳಿಗೆ ದಿನಾಂಕ: 5.12.2024ರಂದು ಜರುಗಿರುವ ಸಭೆಯ ಶಿಫಾರಸ್ಸಿನನ್ವಯ ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಸಂಭಾವನೆಯ ಮೊತ್ತದಲ್ಲಿ ಪ್ರತಿ ಘಟಕಕ್ಕೆ ಶೇಕಡ 50 ರಷ್ಟು ಗೌರವಧನವನ್ನು ಪಾವತಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

ಇತರೆ ವಿಷಯಗಳು:

1) ಶ್ರೀ ಮಹದೇಶು ಅವರು ಮಾತನಾಡಿ, ಸಿಂಡಿಕೇಟ್ ಸದಸ್ಯರಾಗಿ ಒಂದು ವರ್ಷ ಪೂರ್ಣಗೊಂಡಿದೆ. ಇದುವರೆವಿಗೂ ಯಾವುದೇ ಒಂದೇ ಒಂದು ಟೆಂಡರ್ ಆಹ್ವಾನಿಸುವ ಮುನ್ನ ಸಿಂಡಿಕೇಟ್ ಸಭೆಯ ಗಮನಕ್ಕೆ ತಂದಿರುವುದಿಲ್ಲ. ಪ್ರತಿಯೊಂದು ಕೂಡ ಅನುಸಮರ್ಥನೆಗಾಗಿ ಮಾತ್ರ ಮಂಡಿಸಲಾಗುತ್ತಿದೆ. ಕಳೆದ ಎರಡು ಸಿಂಡಿಕೇಟ್ ಸಭೆಯಲ್ಲಿ ಜೆಮ್ ಪೋರ್ಟಲ್ ಬಗ್ಗೆ ಪ್ರಸ್ತಾಪ ಮಾಡಿರುತ್ತೇನೆ. ಇದುವರೆವಿಗೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಜೆಮ್ ಪೋರ್ಟಲ್ ಸಂಬಂಧ ಈಗಾಗಲೇ ಸಭೆ ಕರೆದು ಪರಿಶೀಲಿಸಿದಾಗ ಕ್ರಮಬದ್ಧವಾಗಿರುತ್ತದೆ. ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲು ಕೂಡಲೇ ಒದಗಿಸಲಾಗುವುದು. ಕಛೇರಿಗೆ ಹಾಜರಾಗಿ ಪರಿಶೀಲಿಸಬಹುದು ಎಂದರು.

ಶ್ರೀ ಮಹದೇಶು ಅವರು ಮಾತನಾಡಿ, ಯಾವುದು ಕ್ರಮಬದ್ಧವಾಗಿರುವುದಿಲ್ಲ. ಪರಿಶೀಲಿಸಿದ ನಂತರ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸಾಬೀತುಪಡಿಸುತ್ತೇನೆ. ಸಿಂಡಿಕೇಟ್ ಸದಸ್ಯರುಗಳ ಮೂಲಭೂತ ಪ್ರಶ್ನೆಯೇನೆಂದರೆ, ಯಾವುದೇ ಟೆಂಡರ್ ಆಹ್ವಾನಿಸುವಾಗ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯಬೇಕು ಎಂದರು.

ಶ್ರೀ ಕೆ. ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಜೆಮ್ ಪೋರ್ಟಲ್ ಸಂಬಂಧ ಸಿಂಡಿಕೇಟ್ ಸದಸ್ಯರುಗಳ ಆಕ್ಷೇಪಣೆಯಿದೆ. ವಿಶ್ವವಿದ್ಯಾನಿಲಯವು ನೀಡುವ ದಾಖಲಾತಿಗಳನ್ನು ಆಕ್ಷೇಪಣಾ ಸಹಿ ಹಾಕಿರುವ ಸಿಂಡಿಕೇಟ್ ಸದಸ್ಯರುಗಳೆಲ್ಲರೂ ಪರಿಶೀಲಿಸುತ್ತೇವೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಎಲ್ಲಾ ಟೆಂಡರ್‌ಗಳನ್ನು ಆಹ್ವಾನಿಸುವ ಮೊದಲು ಸಿಂಡಿಕೇಟ್ ಸಭೆಗೆ ತರಬೇಕೆಂದು ತಿಳಿಸಿರುತ್ತೀರಿ. ತುರ್ತು ಸಂದರ್ಭಗಳಲ್ಲಿ ಕುಲಪತಿ ಹಾಗೂ ಕುಲಸಚಿವರು ನಿಯಮಾನುಸಾರ ಟೆಂಡರ್ ಆಯ್ಕೆ ಮಾಡಲು ಅಧಿಕಾರವಿರುತ್ತದೆ. ಯಾವುದೇ ಟೆಂಡರ್‌ಯಾಗಲೀ ಆಹ್ವಾನಿಸುವುದರಿಂದ ಅಯ್ಕೆ ಮಾಡುವವರೆಗೂ ನಿಯಮವನ್ನು ಪಾಲನೆ ಮಾಡಲಾಗಿರುತ್ತದೆ ಎಂದರು.

ಡಾ. ನಟರಾಜು ಹೆಚ್ ಎಸ್ ಅವರು ಮಾತನಾಡಿ, ಟೆಂಡರ್ ಆಹ್ವಾನಿಸಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಆದೇಶವನ್ನು ಹೊರಡಿಸಲಾಗುತ್ತದೆ. ಆದೇಶವನ್ನು ಹೊರಡಿಸುವ ಮೊದಲು ಸಿಂಡಿಕೇಟ್ ಸಭೆಯ ಗಮನಕ್ಕೆ ತರಬೇಕು. ಏಕೆಂದರೆ ಸಾಧಕ-ಬಾಧಕಗಳನ್ನು ಪರಿಶೀಲಿಸಲು ಅವಕಾಶವಾಗುತ್ತದೆ ಎಂದರು.

ಕುಲಪತಿಗಳು ಮಾತನಾಡಿ, ಕೆಟಿಪಿಪಿ ಕಾಯ್ದೆಯಡಿ ಟೆಂಡರ್ ಆಹ್ವಾನಿಸಿದಾಗ, ಯಾವ ಟೆಂಡರ್‌ದಾರರು ಎಲ್ 1 ಆಗಿರುತ್ತಾರೆ ಅವರನ್ನು ಆಯ್ಕೆ ಮಾಡುವುದು ನಿಯಮವಾಗಿರುತ್ತದೆ ಎಂದರು.

ಶ್ರೀ ಕೆ. ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಆನ್‌ಲೈನ್ ವಿಚಾರಕ್ಕೆ ಬರುವುದಾದರೆ ಆರು ತಿಂಗಳ ಮುಂಚೆ ಟೆಂಡರ್ ವಿಷಯಕ್ಕೆ ಆಕ್ಷೇಪಣೆ ಸಲ್ಲಿಸಬಹುದೆಂದು ವಿಶ್ವವಿದ್ಯಾನಿಲಯ ಮತ್ತು ಆನ್‌ಲೈನ್ ಒಪ್ಪಂದವಾಗಿರುತ್ತದೆ. ಇದು ಸಿಂಡಿಕೇಟ್ ಸದಸ್ಯರುಗಳ ಗಮನಕ್ಕೆ ಬಂದಿರುವುದಿಲ್ಲ. ಟೆಂಡರ್ ಕರೆಯುವ ಆರು ತಿಂಗಳ ಮುಂಚೆ ಸಿಂಡಿಕೇಟ್ ಸಭೆಯ ಗಮನಕ್ಕೆ ತಂದು ಆಕ್ಷೇಪಣೆ ಇದೆಯೋ ಅಥವಾ ಇಲ್ಲವೋ ಎಂದು ತಿಳಿಸುವುದು ಕರ್ತವ್ಯವಾಗಿರುತ್ತದೆ ಎಂದರು.

2) ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಛೇರಿಗಳಿಗೆ ಅನಿರೀಕ್ಷಿತ ಭೇಟಿ ನೀಡಿದ್ದ ಸಂದರ್ಭದಲ್ಲಿ ಅಧ್ಯಾಪಕೇತರ ವೃಂದದ ಹಲವಾರು ಸಿಬ್ಬಂದಿಗಳು ಕಛೇರಿ ವೇಳೆಯಲ್ಲಿ ಕಛೇರಿ ಕೆಲಸದಲ್ಲಿ ತೊಡಗಿಸಿಕೊಳ್ಳದೇ ಅನಗತ್ಯವಾಗಿ ಕಛೇರಿ ವೇಳೆಯಲ್ಲಿ ಬೇರೆಡೆ ತೆರಳುತ್ತಿರುವುದು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಅನಿರೀಕ್ಷಿತ ಭೇಟಿ ನೀಡಿದ್ದ ಸಂದರ್ಭಗಳಲ್ಲಿ ಕಛೇರಿಯಲ್ಲಿ

ಉಪಸ್ಥಿತರಿಲ್ಲದಿರುವುದು ಕಂಡು ಬಂದಲ್ಲಿ, ಖಾಯಂ ಸಿಬ್ಬಂದಿಗಳಿಗೆ ಕೆಸಿಎಸ್ಆರ್ ನಿಯಮ ಹಾಗೂ ವಿಶ್ವವಿದ್ಯಾನಿಲಯ ಉದ್ಯೋಗಿಗಳ ಸಿಸಿಎ ಅಧಿನಿಯಮದನ್ವಯ ಕ್ರಮವಹಿಸುವುದಾಗಿ ಹಾಗೂ ತಾತ್ಕಾಲಿಕ ಸಿಬ್ಬಂದಿಗಳು ಈ ರೀತಿಯಾಗಿ ಅಧಿಕಾರಿಗಳು ಕಛೇರಿಗೆ ಭೇಟಿ ನೀಡಿದ್ದ ಸಂದರ್ಭಗಳಲ್ಲಿ ವಾಗ್ದಂಡನೆ ನೀಡುವುದರೊಂದಿಗೆ ಇದೇ ರೀತಿಯಲ್ಲಿ ಮರುಕಳಿಸಿದ್ದಲ್ಲಿ ಮೂರನೇ ಬಾರಿಗೆ ಸದರಿ ತಾತ್ಕಾಲಿಕ ಉದ್ಯೋಗಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ಸೇವೆಯಿಂದ ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

3) ಡಾ. ನಟರಾಜು ಹೆಚ್ ಎಸ್ ಅವರು ಮಾತನಾಡಿ, ಸಿಸ್ಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ 08 ತಾತ್ಕಾಲಿಕ ಉದ್ಯೋಗಿಗಳು ಸುಮಾರು 15-18 ವರ್ಷಗಳ ಸೇವೆ ಸಲ್ಲಿಸಿರುವ ಉದ್ಯೋಗಿಗಳ ಭದ್ರತಾ ದೃಷ್ಟಿಯಿಂದ ವೇತನವನ್ನು 'ಜಿಆರ್ಎ' ಶೀರ್ಷಿಕೆಯಿಂದ ಭರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿದರು. ಈ ಪ್ರಸ್ತಾವನೆಗೆ ಡಾ. ಟಿ.ಆರ್.ಚಂದ್ರಶೇಖರ್, ಶ್ರೀ ಕೆ.ಗೋಕುಲ್ ಗೋವರ್ಧನ್ ಮತ್ತು ಡಾ. ಬಸವರಾಜು ಸಿ ಅವರುಗಳು ಬೆಂಬಲ ವ್ಯಕ್ತಪಡಿಸಿದರು.

ಕುಲಪತಿಗಳು ಮಾತನಾಡಿ, ಸಿಸ್ಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಉದ್ಯೋಗಿಗಳಿಗೆ ಮಾತ್ರ 'ಜಿಆರ್ಎ' ಶೀರ್ಷಿಕೆಯಿಂದ ವೇತನ ಪಾವತಿಸಿದ್ದಲ್ಲಿ, ಇದೇ ರೀತಿ ಐಓಇ, ಚೈನೀಸ್ ಪ್ರೋಗ್ರಾಂ, ಸಿಎಸ್ಎಸ್ಐಪಿ ಹಾಗೂ ಇತರೆ ಪ್ರಾಜೆಕ್ಟ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಉದ್ಯೋಗಿಗಳು ಸಹ 'ಜಿಆರ್ಎ' ಶೀರ್ಷಿಕೆಯಿಂದ ವೇತನ ಪಾವತಿಸಬೇಕೆಂದು ಮನವಿ ಸಲ್ಲಿಸುತ್ತಾರೆ. ಆದ್ದರಿಂದ ಈ ಸಂಬಂಧ ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಲಾಗುವುದು ಎಂದು ತಿಳಿಸಿದರು.

4) ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ 43 ಉದ್ಯೋಗಿಗಳಿಗೆ ಕಳೆದ ಆರು ತಿಂಗಳಿನಿಂದ ಯಾವುದೇ ನೇಮಕಾತಿ ಹಾಗೂ ವೇತನವಿಲ್ಲದೆ ಸಂಕಷ್ಟದಲ್ಲಿದ್ದಾರೆ. ಇವರುಗಳಲ್ಲಿ ಕೆಲವರ ವೇತನವು ರೂ.8,500/- ರಿಂದ 9,000/-ಗಳನ್ನು ತೆಗೆದುಕೊಳ್ಳುವವರು ಇದ್ದಾರೆ. ಈ ಉದ್ಯೋಗಿಗಳಿಗೆ ತಕ್ಷಣವೇ ನೇಮಕಾತಿ ಆದೇಶ ಮತ್ತು ವೇತನವನ್ನು ಬಿಡುಗಡೆ ಮಾಡಬೇಕೆಂದು ಮನವಿ ಸಲ್ಲಿಸಿದರು. ಡಾ. ಬಸವರಾಜು.ಸಿ ಅವರು ಮಾತನಾಡಿ, ಯುವರಾಜ ಕಾಲೇಜಿನ 43 ತಾತ್ಕಾಲಿಕ ಉದ್ಯೋಗಿಗಳ ಸಮಸ್ಯೆಯ ಸಂಬಂಧ ಅಧ್ಯಕ್ಷರು ಸಭೆಯಲ್ಲಿ ತಿಳಿಸಬೇಕೆಂದರು.

ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜು ಸ್ವಾಯತ್ತ ಕಾಲೇಜಾಗಿದ್ದು, ವಿಶ್ವವಿದ್ಯಾನಿಲಯದ ಕುಲಪತಿಗಳು ಆಡಳಿತಾತ್ಮಕ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಒಂದು ವರ್ಷದ ಅವಧಿಗೆ ಮಾತ್ರ ತಾತ್ಕಾಲಿಕ ನೇಮಕಾತಿ ಮಾಡಿಕೊಳ್ಳುವ ಅಧಿಕಾರವಿರುತ್ತದೆಯೋ, ಅದೇ ರೀತಿ ಯುವರಾಜ ಕಾಲೇಜು ಸ್ವಾಯತ್ತ ಕಾಲೇಜಾಗಿರುವುದರಿಂದ ಪ್ರಾಂಶುಪಾಲರು ಅವಶ್ಯಕತೆಗೆ ತಕ್ಕಂತೆ ನೇಮಕಾತಿ ಮಾಡಿಕೊಳ್ಳುವ ಬದಲು ಮೈಸೂರು ವಿಶ್ವವಿದ್ಯಾನಿಲಯದ ಅನುಮತಿ ಪಡೆಯದೇ ಹಾಗೂ ಅಸ್ತಿತ್ವದಲ್ಲಿರದ ಲ್ಯಾಬ್ ಟೆಕ್ನಿಷಿಯನ್, ಟೆಕ್ನಿಕಲ್ ಅಸಿಸ್ಟಂಟ್ ಹುದ್ದೆಗಳನ್ನೊಳಗೊಂಡಂತೆ 44 ಮಂದಿಗಳನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡಿರುತ್ತಾರೆ. ಇದುವರೆವಿಗೂ ಯಾವುದೇ ತೊಂದರೆಯಿಲ್ಲದೆ ಸುಗಮವಾಗಿತ್ತು. ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಕಡಿಮೆ ಪ್ರಮಾಣದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಕ್ರಿಯೆ ನಡೆದಿರುವ ಹಿನ್ನೆಲೆಯಲ್ಲಿ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದೆ. ಈ ತಾತ್ಕಾಲಿಕ ನೇಮಕಾತಿ ಪ್ರಕ್ರಿಯೆಯ ಮಾಹಿತಿಯನ್ನು ಮೂರು ವರ್ಷದಿಂದ ಆಡಿಟ್‌ರವರ ಗಮನಕ್ಕೆ ಕಾಲೇಜಿನವರು ತಂದಿರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ ಆಡಿಟ್‌ನವರು ಕೂಲಂಕಷವಾಗಿ ಪರಿಶೀಲನೆ ಮಾಡುವಾಗ ತಾತ್ಕಾಲಿಕ ನೇಮಕಾತಿ ಮತ್ತು ವೇತನದ ಬಗ್ಗೆ ತೆಗೆದುಕೊಂಡಿರುವ ಪೂರ್ವಾನುಮತಿ ಆದೇಶ ಕೋರಿ ಆಕ್ಷೇಪಿಸಿರುತ್ತಾರೆ. ಆ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ 'ಜಿಆರ್ಎ' ಶೀರ್ಷಿಕೆಯಿಂದ ವೇತನ ಪಾವತಿಸಬೇಕೆಂದು 44 ತಾತ್ಕಾಲಿಕ ಉದ್ಯೋಗಿಗಳ ಮುಖಾಂತರ ಮುಷ್ಕರ ನಡೆಸಿರುತ್ತಾರೆ. ಪೂರ್ವಾನುಮತಿ ಪಡೆಯದೇ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡಿರುವುದು ಯುವರಾಜ ಕಾಲೇಜಿನ ಪ್ರಾಂಶುಪಾಲರಾಗಿರುವುದರಿಂದ, ಈ ಸಮಸ್ಯೆಯನ್ನು ಪ್ರಾಂಶುಪಾಲರ ಮಟ್ಟದಲ್ಲಿಯೇ ಬಗೆಹರಿಸಬೇಕು ಎಂದು ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್ ಮತ್ತು ಡಾ. ಬಸವರಾಜು.ಸಿ ಅವರುಗಳು ಮಾತನಾಡಿ, ಯುವರಾಜ ಕಾಲೇಜಿಗೆ ಶೈಕ್ಷಣಿಕ ಸ್ವಾಯತ್ತತೆಯನ್ನು ಮಾತ್ರ ನೀಡಲಾಗಿತ್ತು. ಆದರೆ, ಆಡಳಿತಾತ್ಮಕ ಮತ್ತು ಆರ್ಥಿಕ ಸ್ವಾಯತ್ತತೆ ನೀಡಿರುವುದಿಲ್ಲ. ಅದನ್ನು ಮೀರಿ ಅವರ ಕಾರ್ಯವ್ಯಾಪ್ತಿ ಮಾಡಿದ್ದಾರೆ ಹಾಗೂ ಮಾಡುತ್ತಿದ್ದಾರೆ. ಇದಕ್ಕೆ ಕಳೆದ ಎರಡು ವರ್ಷಗಳಿಂದ ಕುಲಪತಿ ಮತ್ತು ಕುಲಸಚಿವರು ತೆಗೆದುಕೊಂಡಿರುವ ಕ್ರಮವೇನೆಂದು ಪ್ರಶ್ನಿಸಿದರು.

ಕುಲಪತಿಗಳು ಮಾತನಾಡಿ, ಕುಲಪತಿಯಾಗಿ ಅಧಿಕಾರ ವಹಿಸಿಕೊಂಡ 5-6 ತಿಂಗಳ ನಂತರ ತಿಳಿದುಬಂದ ಕೂಡಲೇ ಯುವರಾಜ ಕಾಲೇಜಿಗೆ ಭೇಟಿ ನೀಡಿ, ಕಾಲೇಜಿನ ಸಮಸ್ಯೆಗಳ ಕುರಿತು ಒಂದು ಸಮಿತಿಯನ್ನು ರಚಿಸಲಾಯಿತು. ಆಡಳಿತಾತ್ಮಕ ಮತ್ತು ಹಣಕಾಸಿನ ಸಮಸ್ಯೆಗಳನ್ನು ಕೂಲಂಕಷವಾಗಿ ಪರಾಮರ್ಶೆ ಮಾಡಿ, ವರದಿಯನ್ನು ಪಡೆಯುವ ಸಂಬಂಧ ಕುಲಸಚಿವ (ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿ ಇವರುಗಳನ್ನು ಭೇಟಿ ಮಾಡಲು ತಿಳಿಸಲಾಯಿತು ಎಂದರು.

ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ, ಹಣಕಾಸು ಸಮಿತಿ ಸಭೆಯಲ್ಲಿ ನಾನು ಮತ್ತು ಹಣಕಾಸು ಅಧಿಕಾರಿಗಳು ಭಾಗವಹಿಸಿ ಪರಿಶೀಲಿಸಿದಾಗ, ಯುವರಾಜ ಕಾಲೇಜಿನಲ್ಲಿ ಒಟ್ಟು 13 ಖಾತೆಗಳಿದ್ದು, ಇವುಗಳಲ್ಲಿ ಒಂದು ಖಾತೆಯಲ್ಲಿಯೂ ಬಾಕಿ ಮೊತ್ತ update ಆಗಿರುವುದಿಲ್ಲ ಹಾಗೂ ಆಡಿಟ್ ಸಹ ಮಾಡಿಸಿರುವುದಿಲ್ಲ. 13 ಖಾತೆಗಳ statement update ಮಾಡಿ balance ನೀಡಿದ ನಂತರ ಸಭೆ ಮುಂದುವರೆಸಲಾಗುವುದೆಂದು ತಿಳಿಸಲಾಯಿತು. ತಹಲ್‌ವರೆಗೂ 13 ಖಾತೆಗಳ statement update ಮಾಡಿ balance ನೀಡಿರುವುದಿಲ್ಲ. ಈ ಮಧ್ಯೆ 13 ಖಾತೆಗಳಲ್ಲಿ ಮುಖ್ಯವಾಗಿ ಭಾಗಿಯಾಗಿದ್ದ ಶ್ರೀ ಶಿವಕುಮಾರ್ ಅವರ ಆತ್ಮಹತ್ಯೆ ಪ್ರಕರಣದಿಂದ ವರದಿ ತಡವಾಗಿರಬಹುದೆಂದರು.

ಶ್ರೀ ನಾಗರಾಜು.ಸಿ ಅವರು ಮಾತನಾಡಿ, 43 ತಾತ್ಕಾಲಿಕ ಉದ್ಯೋಗಿಗಳಲ್ಲಿ 11 ಉದ್ಯೋಗಿಗಳಿಗೆ ಯುವರಾಜ ಕಾಲೇಜಿನ ಖಾತೆಯಿಂದ ಹಣ ಜಮಾವಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ಕಾಲೇಜಿನ ಪ್ರಾಂಶುಪಾಲರು, ಆಡಳಿತಾಧಿಕಾರಿ ಮತ್ತು ಪರೀಕ್ಷಾ ನಿಯಂತ್ರಣಾಧಿಕಾರಿಗಳು 13 ಖಾತೆಯಿಂದ ಯಾವುದೇ ಉದ್ಯೋಗಿಯ ಖಾತೆಗೆ ಹಣ ಜಮಾವಾಗದಂತೆ ನಿಯಂತ್ರಿಸುವುದು ಜವಾಬ್ದಾರಿಯಾಗಿದೆ ಎಂದರು.

ಕುಲಪತಿಗಳು ಮಾತನಾಡಿ, ಪ್ರಸ್ತುತ ಯುವರಾಜ ಕಾಲೇಜು ಅನೇಕ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿರುವುದರಿಂದ, ಈ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಹಣಕಾಸು ವ್ಯವಹಾರವನ್ನು ಹೇಗೆ ವಹಿಸಿಕೊಳ್ಳುವುದು. ಆದಕಾರಣ ಯುವರಾಜ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷರಾಗಿರುವ ನಾನು ಒಂದು ಸಮಿತಿಯನ್ನು ರಚಿಸಿದ್ದು, ಸದರಿ ಕಾಲೇಜಿನ ಎಲ್ಲಾ ಖಾತೆಗಳಲ್ಲಿರುವ ಹಣವನ್ನು ಲೆಕ್ಕಾಚಾರ ಮಾಡಿ ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸಿದ್ದಲ್ಲಿ, ಎಲ್ಲಾ ಹಣಕಾಸು ವ್ಯವಹಾರವನ್ನು ವಿಶ್ವವಿದ್ಯಾನಿಲಯವು ವ್ಯವಹರಿಸಲಾಗುತ್ತದೆ ಎಂದು ತಿಳಿಸಿದ್ದರೂ ಸಹ ಇದುವರೆವಿಗೂ ಯಾವುದೇ ಕ್ರಮವಹಿಸಿರುವುದಿಲ್ಲ. ಮುಂದುವರೆದು, ಪಿಹೆಚ್.ಡಿ ಪದವಿ ಪಡೆಯದ ಮತ್ತು ಸೆಟ್/ನೆಟ್ ತೇರ್ಗಡೆಯಾಗದ 48 ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿರುವುದು ಕಂಡುಬಂದಿದ್ದು, ಈ ಅತಿಥಿ ಉಪನ್ಯಾಸಕರುಗಳಿಗೆ ಪಿಹೆಚ್.ಡಿ ಪದವಿ/ಸೆಟ್/ನೆಟ್ ತೇರ್ಗಡೆ ಹೊಂದಲು ಒಂದು ವರ್ಷ ಕಾಲಾವಕಾಶ ನೀಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಡಾ. ಬಸವರಾಜು.ಸಿ ಅವರು ಮಾತನಾಡಿ, ವಿಚಾರಣಾ ಸಮಿತಿಯು ತಡವಾಗಿ ವರದಿ ಸಲ್ಲಿಸುವುದರಿಂದ, ವಿಶ್ವವಿದ್ಯಾನಿಲಯಕ್ಕೆ ಅನಾನುಕೂಲವಾಗುತ್ತದೆ. ಆದ್ದರಿಂದ, ವಿಚಾರಣಾ ಸಮಿತಿಯು ಶೀಘ್ರವಾಗಿ ವರದಿ ಸಲ್ಲಿಸಿದ್ದಲ್ಲಿ, ಕಾಲೇಜಿನ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಉದ್ಯೋಗಿಗಳ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಯಾವುದೇ ಉದ್ಯೋಗಿಯ ಮೇಲೆ ವಿಶ್ವವಿದ್ಯಾನಿಲಯ ಕ್ರಮ ತೆಗೆದುಕೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಈ

ರೀತಿಯ ಹಣ ದುರುಪಯೋಗಗಳು ಮುಂದುವರೆಯುತ್ತದೆ. ಇದಕ್ಕೆಲ್ಲಾ ತಾರ್ಕಿಕ ಅಂತ್ಯ ಯಾವಾಗ ನೀಡುತ್ತೀರೆಂದು ಕೇಳಿದರು.

ಕುಲಸಚಿವರು ಮಾತನಾಡಿ, ನಿವೃತ್ತ ನ್ಯಾಯಾಧೀಶರನ್ನೊಳಗೊಂಡಂತೆ ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ. ಆದರೆ, ವಿಚಾರಣಾ ಸಮಿತಿಯವರು ಕಾಲೇಜಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಯುಕ್ತ ರೀತಿಯಲ್ಲಿ ದಾಖಲಾತಿಗಳನ್ನು ಒದಗಿಸಿರುವುದಿಲ್ಲವೆಂದರು.

ಶ್ರೀ ಮಹದೇಶು ಅವರು ಮಾತನಾಡಿ, ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕದ ಮೊತ್ತವನ್ನು ದುರುಪಯೋಗ ಮಾಡಿಕೊಂಡಿರುವವರಲ್ಲಿ ಪ್ರಾಂಶುಪಾಲರಾದ ಡಾ. ದೇವರಾಜೇಗೌಡ ಹಾಗೂ ಧನಾದೇಶದಲ್ಲಿ ಮೊಬಲಗು ನಮೂದಿಸುವ ಗುಮಾಸ್ತರು ಇದರೊಂದಿಗೆ ಆತ್ಮಹತ್ಯೆ ಮಾಡಿಕೊಂಡಿರುವ ಅಧೀಕ್ಷಕರಾದ ಶ್ರೀ ಮಹೇಶ್‌ಕುಮಾರ್ ಅವರುಗಳ ಹೆಸರುಗಳು ಹೆಚ್ಚಾಗಿ ಪ್ರಸ್ತಾಪವಾಗುತ್ತಿದೆ. ಇದರಲ್ಲಿ ಮುಖ್ಯವಾಗಿ ಧನಾದೇಶದಲ್ಲಿ ಮೊಬಲಗು ನಮೂದಿಸಿರುವ ಗುಮಾಸ್ತರು ಹಾಗೂ ಧನಾದೇಶಕ್ಕೆ ಸಹಿ ಮಾಡಿರುವ ಪ್ರಾಂಶುಪಾಲರು ಈ ಪ್ರಕರಣದಲ್ಲಿ ಭಾಗಿಯಾಗಿರುತ್ತಾರೆಂದು ಅಭಿಪ್ರಾಯಿಸಿದರು.

ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜಿನಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಬೇಕೆಂದರೆ ಆ ಕಾಲೇಜಿನಲ್ಲಿ ಸಮನ್ವಯತೆ ಇರುವುದಿಲ್ಲ. ವಿಶ್ವವಿದ್ಯಾನಿಲಯದೊಂದಿಗೂ ಹೊಂದಾಣಿಕೆ ಮಾಡಿಕೊಳ್ಳುತ್ತಿಲ್ಲ. ಏನೇ ಸಮಸ್ಯೆಯಿದ್ದರೂ ಕಾಲೇಜಿಗೆ ಸಂಬಂಧಪಡುವುದಿಲ್ಲವೆಂದು ಭಾವಿಸಿ, ವಿಶ್ವವಿದ್ಯಾನಿಲಯವೇ ಪರಿಹರಿಸಬೇಕೆಂದು ತಿಳಿಸುತ್ತಾರೆ. ಯುವರಾಜ ಕಾಲೇಜಿನ ಪ್ರವೇಶಾತಿ ಶುಲ್ಕದ ದುರುಪಯೋಗದ ಬಗ್ಗೆ ಹಲವಾರು ಹೆಸರುಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕದ ಮೊತ್ತದ ದುರುಪಯೋಗ, ಖಾತೆಗಳ ಬಗ್ಗೆ, ಯಾರ ಖಾತೆಗೆ ಯಾವಾಗ, ಎಷ್ಟು ಮೊತ್ತ ಜಮಾವಾಗಿರುವ ವಿವರ ಮತ್ತು ಇತರೆ ಮಾಹಿತಿಯನ್ನು ಕಲೆಹಾಕಿ ಈ ಸಂಬಂಧ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಹಣಕಾಸು ಅಧಿಕಾರಿ ಅವರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲಾಗುವುದು. ಸಮಿತಿಯು ವರದಿಯನ್ನು ಸಲ್ಲಿಸಿದ ನಂತರ ಜರೂರಾಗಿ ಆಡಿಟ್‌ನವರಿಗೆ ದಾಖಲೆಗಳನ್ನು ಒದಗಿಸಬೇಕು ಎಂದರು.

ಶ್ರೀ ಮಹದೇಶು ಅವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ 43 ಉದ್ಯೋಗಿಗಳ ನೇಮಕಾತಿ ಮಾಡಿಕೊಳ್ಳುವ ಮುನ್ನ ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆದಿರುವುದಿಲ್ಲವೆಂದು ತಿಳಿಸಿರುತ್ತೀರಿ. ಆದರೆ ತಾತ್ಕಾಲಿಕ ಉದ್ಯೋಗಿಗಳ ಮರು ನೇಮಕಾತಿ ಆದೇಶದಲ್ಲಿ "ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ" ಎಂಬ ವಾಕ್ಯವನ್ನು ಉಪಯೋಗಿಸಿದ್ದಾರೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು.

ಈ ಸಂಬಂಧ ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜಿನ ಪ್ರಾಂಶುಪಾಲರು ತಾತ್ಕಾಲಿಕ ಉದ್ಯೋಗಿಗಳ ವೇತನವನ್ನು ಯುವರಾಜ ಕಾಲೇಜಿನ ವತಿಯಿಂದಲೇ ಭರಿಸಲಾಗುವುದೆಂದು ಮೌಖಿಕವಾಗಿ ತಿಳಿಸಿ, ಕಡತಕ್ಕೆ ಅನುಮೋದನೆ ಪಡೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಈ ರೀತಿಯ ವಾಕ್ಯವನ್ನು ಉಪಯೋಗಿಸುತ್ತಿದ್ದಾರೆ ಹೊರತು, ಆ ಕಾಲೇಜಿನ ತಾತ್ಕಾಲಿಕ ಉದ್ಯೋಗಿಗಳಿಗೆ ಸಂಬಂಧಪಟ್ಟ ಯಾವುದೇ ಕಡತ/ದಾಖಲೆಗಳು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಡಾ. ಟಿ.ಆರ್.ಚಂದ್ರಶೇಖರ್ ಅವರು ಮಾತನಾಡಿ, ಯುವರಾಜ ಕಾಲೇಜಿಗೆ ಡಾ. ದೇವರಾಜೇಗೌಡ ಅವರು ಪ್ರಾಂಶುಪಾಲರಾಗುವ ಮೊದಲು 43 ತಾತ್ಕಾಲಿಕ ಉದ್ಯೋಗಿಗಳ ವೇತನವನ್ನು 'ಜಿಆರ್‌ಎ' ಶೀರ್ಷಿಕೆಯಿಂದ ಭರಿಸಲಾಗುತ್ತಿತ್ತು. ಡಾ. ದೇವರಾಜೇಗೌಡ ಅವರು ಪ್ರಾಂಶುಪಾಲರಾದ ನಂತರ ದಿನಾಂಕ: 05-12-2023ರಲ್ಲಿ ಈ ತಾತ್ಕಾಲಿಕ ಉದ್ಯೋಗಿಗಳ ಆದೇಶವನ್ನು ಹೊರಡಿಸಿದಾಗ ವೇತನವನ್ನು 'ಪಿಎಸ್‌ಎಫ್‌ಎಸ್' ಶೀರ್ಷಿಕೆಗೆ ವರ್ಗಾವಣೆ ಮಾಡಿರುತ್ತಾರೆ. ಅಲ್ಲಿನ ಉದ್ಯೋಗಿಗಳು ತಿಳಿಸುವುದೇನೆಂದರೆ, 'ಪಿಎಸ್‌ಎಫ್‌ಎಸ್' ಶೀರ್ಷಿಕೆಯಲ್ಲಿ ಕಡಿಮೆ ಅನುದಾನವಿದ್ದು, ಆ ಅನುದಾನ

ಪೂರ್ಣಗೊಂಡ ನಂತರ ಉದ್ಯೋಗಿಗಳನ್ನು ಬಿಡುಗಡೆಗೊಳಿಸುವ ಉದ್ದೇಶವಿರಬಹುದು ಎಂದು ತಿಳಿಸಿರುತ್ತಾರೆ ಎಂದು ಸಭೆಯಲ್ಲಿ ಪ್ರಸ್ತಾಪ ಮಾಡಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜಿನ ಅಧೀಕ್ಷಕರಾದ ಶ್ರೀ ಮಹೇಶ್‌ಕುಮಾರ್ ಮತ್ತು ಗುಮಾಸ್ತರಾದ ಶ್ರೀ ಶಿವಕುಮಾರ್ ಇಬ್ಬರು ಆತ್ಮಹತ್ಯೆ ಮಾಡಿಕೊಂಡಿರುವುದರಿಂದ, ವಿಚಾರಣಾ ಸಮಿತಿಯ ವಿಚಾರಣೆಯು ಪೂರ್ಣಗೊಳ್ಳಲಿಲ್ಲ. ಆದ್ದರಿಂದ ಯುವರಾಜ ಕಾಲೇಜಿನ ಆರ್ಥಿಕ ಅವ್ಯವಹಾರಗಳನ್ನು ಪರಿಶೀಲಿಸುವ ಸಂಬಂಧ ಒಂದು ಸಮಿತಿಯನ್ನು ರಚಿಸಿ, ಸಮಿತಿಯು ಜರೂರಾಗಿ ವರದಿ ಸಲ್ಲಿಸಲು ತಿಳಿಸಲಾಗುವುದು. ಹಾಗೆಯೇ, ಯುವರಾಜ ಕಾಲೇಜಿನ ಪ್ರಾಂಶುಪಾಲರು ಆದಷ್ಟು ಜರೂರಾಗಿ ಆಡಳಿತ ಮಂಡಳಿ ಸಭೆಯನ್ನು ಆಯೋಜಿಸಬೇಕೆಂದು ತಿಳಿಸಿ, ಸದರಿ ಆಡಳಿತ ಮಂಡಳಿ ಸಭೆಯಲ್ಲಿ 43 ತಾತ್ಕಾಲಿಕ ಉದ್ಯೋಗಿಗಳ ವೇತನಕ್ಕೆ ಸಂಬಂಧಿಸಿದಂತೆ ತಾರ್ಕಿಕವಾಗಿ ಅಂತ್ಯಗೊಳಿಸಲಾಗುವುದೆಂದು ತಿಳಿಸಿದರು.

5) ಡಾ. ಬಸವರಾಜು.ಸಿ ಮತ್ತು ಡಾ. ಟಿ.ಆರ್. ಚಂದ್ರಶೇಖರ್ ಅವರುಗಳು ಮಾತನಾಡಿ, ತೋಟಗಾರಿಕಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಉದ್ಯೋಗಿಗಳಲ್ಲಿ ಕೆಲವರಿಗೆ ರೂ.೮,೦೦೦/- ವೇತನ ಪಡೆಯುತ್ತಿರುವುದು ಕಂಡುಬಂದಿದೆ. ಅಂತಹವರಿಗೆ ವೇತನವನ್ನು ಹೆಚ್ಚಿಸಬೇಕೆಂದು ಕೋರಿದರು.

6) ಶ್ರೀ ಮಹದೇಶು ಅವರು ಮಾತನಾಡಿ, ತಾತ್ಕಾಲಿಕ ಉದ್ಯೋಗಿಗಳನ್ನು ತರ್ಕಬದ್ಧಗೊಳಿಸುವ ಸಂಬಂಧ ಸಮಿತಿಯು ಸಲ್ಲಿಸಿರುವ ವರದಿಯೇನೆಂದು ಕೇಳಿದರು.

ಕುಲಪತಿಗಳು ಮಾತನಾಡಿ, ಸಮಿತಿಯವರು ವರದಿಯನ್ನು ಸಲ್ಲಿಸಿರುತ್ತಾರೆ. ಈ ವರದಿಯನ್ನು ಸರ್ಕಾರದ ಕಾರ್ಯದರ್ಶಿಯವರ ಗಮನಕ್ಕೆ ತರಲಾಗಿ, ಸರ್ಕಾರದ ಕಾರ್ಯದರ್ಶಿಗಳು ವರದಿಯನ್ವಯ ತಾತ್ಕಾಲಿಕ ಉದ್ಯೋಗಿಗಳನ್ನು ಬಿಡುಗಡೆಗೊಳಿಸಿ, ಹೊರಗುತ್ತಿಗೆ ಆಧಾರದ ಮೇಲೆ ಉದ್ಯೋಗಿಗಳನ್ನು ನೇಮಕಾತಿ ಮಾಡಿಕೊಳ್ಳುವಂತೆ ತಿಳಿಸಿರುತ್ತಾರೆ. ಮುಂದುವರೆದು, ಡಾ. ಪಿ.ಸಿ.ಜಾಫರ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ (ಆಯವ್ಯಯ ಹಾಗೂ ಸಂಪನ್ಮೂಲ) ಇವರನ್ನು ಭೇಟಿ ಮಾಡಿ ವಿಶ್ವವಿದ್ಯಾನಿಲಯಕ್ಕೆ ಅನುದಾನ ಬಿಡುಗಡೆ ಮಾಡಬೇಕೆಂದು ಕೋರಿದ್ದ ಹಿನ್ನೆಲೆಯಲ್ಲಿ, ಸದರಿ ಕಾರ್ಯದರ್ಶಿಗಳು ಮೊದಲು ಎಲ್ಲಾ ತಾತ್ಕಾಲಿಕ ಉದ್ಯೋಗಿಗಳನ್ನು ಬಿಡುಗಡೆಗೊಳಿಸಿ, ಅವಶ್ಯಕತೆಗನುಗುಣವಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡ ನಂತರ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಿ ಎಂದು ತಿಳಿಸುತ್ತಾರೆ. ಈ ಸಂಬಂಧ ಕಾನೂನು ಸಲಹೆಗಾರರ ಅಭಿಪ್ರಾಯ ಮತ್ತು ಹಣಕಾಸು ಸಮಿತಿಯಲ್ಲಿ ಸಭೆ ನಡೆಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಆದರೂ ಎಲ್ಲಾ ತಾತ್ಕಾಲಿಕ ಉದ್ಯೋಗಿಗಳನ್ನು ಬಿಡುಗಡೆಗೊಳಿಸಿ, ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದು ಸುಲಭದ ಕೆಲಸವಲ್ಲವೆಂದು ತಿಳಿಸಿದರು.

7) ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿ ಸಿಬ್ಬಂದಿಗಳಿಗೆ ಸುರಕ್ಷತಾ ಪರಿಕರಗಳನ್ನು ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡಬೇಕೆಂದು ಮನವಿ ಮಾಡಿದರು.

ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿ ಸಿಬ್ಬಂದಿಗಳಿಗೆ ಸುರಕ್ಷತಾ ಪರಿಕರಗಳನ್ನು ಒದಗಿಸಲು ವ್ಯವಸ್ಥೆ ಮಾಡಲಾಗುವುದು. ಆದರೆ ಸಫಾಯಿ ಕರ್ಮಚಾರಿ ಸಿಬ್ಬಂದಿಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೊಳಿಸಿದರೆ, ವಿವಿಧ ಅಧ್ಯಯನ ವಿಭಾಗ/ಕಛೇರಿಗಳಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃಂದದವರು ಸಹ ಬೇಡಿಕೆ ಸಲ್ಲಿಸುತ್ತಾರೆ. ಇದರಿಂದ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೊಳಿಸಲು ಸಾಧ್ಯವಿಲ್ಲವೆಂದು ಮನದಟ್ಟು ಮಾಡುತ್ತಾ, ಸ್ವಚ್ಛತಾ/ಸಫಾಯಿ ಕರ್ಮಚಾರಿ ಸಿಬ್ಬಂದಿಗಳಲ್ಲಿ ಅನೇಕರು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವುದು ಕಂಡುಬಂದಿದೆಯೆಂದು ಸಭೆಯಲ್ಲಿ ತಿಳಿಸಿದರು.

8) ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಡಾ. ಎಂ.ಮೀರಾ, ಸಹ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ ಇವರಿಗೆ ಪದೋನ್ನತಿ ಆದೇಶವನ್ನು ನೀಡಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು.

ಕುಲಪತಿಗಳು ಮಾತನಾಡಿ, ಪದೋನ್ನತಿ ನೀಡಲು ಕೆಲವು ನಿಯಮಗಳಿರುತ್ತದೆ. ಡಾ. ಎಂ. ಮೀರಾ ಅವರು 18 ವರ್ಷಗಳ ಪ್ರಾಧ್ಯಾಪರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಆದರೆ 2-3 ವಿದ್ಯಾರ್ಥಿಗಳಿಗೂ ಪಿಎಚ್.ಡಿ. ಸಂಶೋಧನಾ ಮಾರ್ಗದರ್ಶಕರಾಗಿ ಕರ್ತವ್ಯನಿರ್ವಹಿಸಿರುವುದಿಲ್ಲ. ಅಷ್ಟೆ ಅಲ್ಲದೆ ಪದೋನ್ನತಿ ಸಂದರ್ಶನಕ್ಕೆ ಹಾಜರಾಗುವಾಗ ಅವರ ಅರ್ಹತೆ ದಾಖಲೆಗಳನ್ನು ಸಹ ಸಲ್ಲಿಸಿರುವುದಿಲ್ಲವಾದ್ದರಿಂದ ಮುಂದಿನ ದಿನಗಳಲ್ಲಿ ಆದೇಶ ನೀಡಲಾಗುವುದು.

9) ಡಾ. ಟಿ.ಆರ್. ಚಂದ್ರಶೇಖರ್ ಮತ್ತು ಡಾ. ಬಸವರಾಜು.ಸಿ ಅವರುಗಳು ಮಾತನಾಡಿ, ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳಿಗೂ ಮತ್ತು ಅಧ್ಯಾಪಕೇತರ ಉದ್ಯೋಗಿಗಳಿಗೂ ಕನಿಷ್ಠ ರೂ.3,000/-ಗಳ ವೇತನವನ್ನು ಪರಿಷ್ಕರಿಸಬೇಕೆಂದು ಮನವಿ ಮಾಡಿದರು.

ಕುಲಪತಿಗಳು ಮಾತನಾಡಿ, ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳಿಗೂ ಮತ್ತು ಮಂಜೂರಾದ ಹುದ್ದೆಗಳಿಗಿಂತ ಹೆಚ್ಚಾಗಿರುವ ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳಿಗೆ ರೂ.3,000/- ಅಲ್ಲದಿದ್ದರೂ ರೂ.500/-ಗಳನ್ನು ಪರಿಷ್ಕರಿಸಿದ್ದರೂ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಆರ್ಥಿಕ ಹೊರೆಯುಂಟಾಗುವುದರಿಂದ ಪ್ರಸ್ತುತ ಪರಿಸ್ಥಿತಿಯಲ್ಲಿ ಪರಿಷ್ಕರಣೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಪ್ರೊ. ಜಿ.ಹೇಮಂತ್‌ಕುಮಾರ್ ಅವರು ಕುಲಪತಿಯಾಗಿದ್ದ ಅವಧಿಯಲ್ಲಿ ಕೋವಿಡ್-19 ಸಂದರ್ಭದಲ್ಲಿ ಸುಮಾರು 450-500 ಮಂದಿ ಉದ್ಯೋಗಿಗಳನ್ನು ತಾತ್ಕಾಲಿಕವಾಗಿ ಕೆಲಸಕ್ಕೆ ಸೇರಿಸಿಕೊಂಡಿರುತ್ತಾರೆ. ಅವರುಗಳನ್ನು ತೆಗೆದು ಹಾಕಿದ್ದರೆ ವೇತನ ಪರಿಷ್ಕರಿಸಲು ಸಾಧ್ಯವಾಗಬಹುದೆಂದು ಸಲಹೆ ನೀಡಿದರು.

ಅಂತಿಮವಾಗಿ ಮಾನ್ಯ ಕುಲಸಚಿವರು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೂಕ್ತ ಸಲಹೆ ಮತ್ತು ಸಹಕಾರಗಳನ್ನು ನೀಡಿರುವ ಸಭಾಧ್ಯಕ್ಷರಿಗೆ ಹಾಗೂ ಸದಸ್ಯರುಗಳಿಗೆಲ್ಲಾ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ** | **ಕುಲಪತಿ ಹಾಗೂ ಅಧ್ಯಕ್ಷರು**